# ಅಕ್ಟೋಬರ್.12 ರಂದು ನೇರ ಸಂದರ್ಶನ

ಯಾದಗಿರಿ,9– ಕರ್ನಾಟಕ ಸರ್ಕಾರದ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ಹಾಗೂ ಯಾದಗಿ–ರಿಯ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ವತಿಯಿಂದ ದಿನಾಂಕ: 12–10–2026 ರಂದು ನೇರ ಸಂದರ್ಶನವನ್ನು ಆಯೋಜಿಸಲಾಗಿದೆ.

ಡಾನ್ ಬಾಸ್ಕೊ ಟೆಕ್ ಸೊಸೈಟಿಯಲ್ಲಿ ಅ) ಡಿಜಿಟಲ್ ಮಿತ್ರ (ಡಾಟಾ ಎಂಟ್ರೀ) ಹುದ್ದೆಗೆ 60 ಹುದ್ದೆಗಳು ಖಾಲಿ ಇದ್ದು, ಹುದ್ದೆಗೆ ಅರ್ಹತೆ 10ನೇ ತರಗತಿ ಪಾಸ್ ಅಥವಾ ಮೇಲ್ಪಟ್ಟು ವಿಧ್ಯಾರ್ಹತೆ ಅಗಿರಬೇಕು. ಆ) ಕಸ್ಟಮರ್ ಕೇರ್ ಎಕ್ಸಿಕ್ಯೂಟಿವ್ ಹುದ್ದೆಗೆ 40 ಹುದ್ದೆಗಳು ಖಾಲಿ ಇದ್ದು ಹುದ್ದೆಗೆ ಅರ್ಹತೆ 10ನೇ ತರಗತಿ ಪಾಸ್ ಅಥವಾ ಮೇಲ್ಪಟ್ಟು ವಿಧ್ಯಾರ್ಹತೆ ಅಗಿರಬೇಕು. ಇ) ಕಸ್ಟಮರ್ ಕೇರ್ ಎಕ್ಸಿಕ್ಯೂಟಿವ್ ತರಬೇತಿದಾರರು 01 ಹುದ್ದೆಗೆ ಯಾವುದೇ ಪದವಿ ವಿಧ್ಯಾರ್ಹತೆ ಹೊಂದಿರಬೇಕು. (ಕಡ್ಡಾಯವಾಗಿ ಇಂಗ್ಲೀಷ್ ಭಾಷೆ ಮಾತನಾಡಲು ಬರಬೇಕು). 02 ತಿಂಗಳ ತರಬೇತಿ ನಂತರ ಉದ್ಯೋಗ ದೊರಕಿಸಿ ಕೊಡಲಾಗುವುದು. 18 ರಿಂದ 30 ವರ್ಷ ಮಹಿಳೆ ಮತ್ತು ಪುರುಷ ಅಭ್ಯರ್ಥಿಗಳು ಭಾಗವಹಿಸಬಹುದಾಗಿದೆ. ಮಹಿಳೆಯರಿಗೆ 70% & ಪುರುಷರಿಗೆ 30% ಕಾಯ್ದಿರಿಸಲಾಗಿದೆ.

ಕ್ರಿಯೆಟಿವ್ ಎಮಿನೆಂಟ್ ಹೆಚ್ ಆರ್ ಸೋಲುಷನ್ಸ್ ಪ್ರೈ.ಲಿ. 1. ಅ) ಟೆಕ್ನಿಕಲ್ ಆಪರೇಟರ್ ಹುದ್ದೆಗೆ 150 ಹುದ್ದೆಗಳು ಆ) ಡಾಟಾ ಎಂಟ್ರೀ ಆಪರೇಟರ್ ಹುದ್ದೆಗೆ 25 ಇ) ಕ್ವಾಲಿಟಿ ಇನ್‌ಚಾರ್ಜ ಹುದ್ದೆಗೆ 50 ಹುದ್ದೆಗಳು ಖಾಲಿ ಇದ್ದು ಹುದ್ದೆಗೆ ಅರ್ಹತೆ ಎಸ್.ಎಸ್.ಎಲ್.ಸಿ, ಪಿಯುಸಿ, ಐಟಿಐ, ಡಿಪ್ಲೋಮ, ಯಾವುದೇ ಪದವಿ ಹೊಂದಿದ ಅಭ್ಯರ್ಥಿಗಳು ಭಾಗವಹಿಸಬಹುದಾಗಿದೆ. 2. ಅ) ಮಶೀನ್ ಆಪರೇಟರ್ ಹುದ್ದೆಗೆ 50 ಹುದ್ದೆಗಳು, ಆ) ಆಪರೇಟರ್ ಹುದ್ದೆಗೆ 40 ಹುದ್ದೆಗಳು, ಇ) ಟೆಕ್ನೀಕಲ್ ಆಪರೇಟರ್ ಹುದ್ದೆಗೆ 100 ಹುದ್ದೆಗಳು, ಕ್ವಾಲಿಟಿ ಚೆಕಿಂಗ್ ಆಪರೇಟರ್ ಹುದ್ದೆಗೆ 60 ಹುದ್ದೆಗಳು ಖಾಲಿ ಇದ್ದು ಹುದ್ದೆಗೆ ಅರ್ಹತೆ ಐಟಿಐ, ಡಿಪ್ಲೋಮ, ಯಾವುದೇ ಟ್ರೇಡ್ ವಿಧ್ಯಾರ್ಹತೆ ಹೊಂದಿರತಕ್ಕದ್ದು. 18 ರಿಂದ 32 ವರ್ಷ ಪುರುಷ/ಮಹಿಳೆ ಆಭ್ಯರ್ಥಿಗಳು ಭಾಗವಹಿಸಬಹುದಾಗಿದೆ. ಬೆಂಗಳೂರು ಉದ್ಯೋಗ ಸ್ಥಳವಾಗಿದೆ. ಪಿ.ಎಫ್. ಇ.ಎಸ್.ಐ. ಕ್ಯಾಂಟಿನ್/ಕ್ಯಾಬ್ ಸೌಲಭ್ಯವಿರುತ್ತದೆ. ಅವಕಾಶ ವಂಚಿತ ನಿರುದ್ಯೋಗಿ ಅಭ್ಯರ್ಥಿಗಳು ನೇರ ಸಂದರ್ಶನಕ್ಕೆ ಹಾಜರಾಗಲು ತಿಳಿಸಲಾಗಿದೆ.

ಈ ನೇರ ಸಂದರ್ಶನಕ್ಕೆ ಬರುವ ಅಭ್ಯರ್ಥಿಗಳು ತಮ್ಮ ದಾಖಲಾತಿಗಳೊಂದಿಗೆ ವ್ಯಕ್ತಿ ಪರಿಚಯ ರಿಸ್ಯೂಮ್/ ಬಯೋಡಾಟಾದೊಂದಿಗೆ ನೇರ ಸಂದರ್ಶನಕ್ಕೆ ಹಾಜರಾಗಲು ತಿಳಿಸಲಾಗಿದೆ. ಹಾಗೂ ನೇರ ಸಂದರ್ಶನಕ್ಕೆ ಹಾಜರಾದ ಅಭ್ಯರ್ಥಿಗಳಿಗೆ ಯಾವುದೇ ತರಹದ ಭತ್ಯೆ ನೀಡಲಾಗುವುದಿಲ್ಲ.

ನೇರ ಸಂದರ್ಶನ ನಡೆಯುವ ಸ್ಥಳ ಹಾಗೂ ಹೆಚ್ಚಿನ ಮಾಹಿತಿಗಾಗಿ: ಚಿತ್ತಾಪೂರು ರೋಡ್ (ಮಿನಿ ವಿಧಾನ ಸೌಧ) ಜಿಲ್ಲಾಡಳಿತ ಭವನ, ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ ಬಿ–ಬ್ಲಾಕ್ ರೂ. ನಂ. ಬಿ1 & ಬಿ2 2ನೇ ಮಹಡಿ ಯಾದಗಿರಿ. ಇವರ ದೂರವಾಣಿ ಸಂ–ಖ್ಯೆ: 08473–253718 ಹಾಗೂ ಮೊ ನಂ. 9448566765 ಗೆ ಕಛೇರಿಯ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಯಾದಗಿರಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಉದ್ಯೋಗಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಕ್ಟೋಬರ್ ಮಾಹೆಯ ಪಡಿತರ ಧಾನ್ಯ ವಿತರಣೆ

ಯಾದಗಿರಿ, 9–ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪ ನಿರ್ದೇಶಕರ ಕಾರ್ಯಾಲಯವು ಅಕ್ಟೋಬರ್ 2026 ರ ಮಾಹೆಯ ಪಡಿತರ ವಿತರಣೆಯ ಕುರಿತು ಪತ್ರಿಕಾ ಪ್ರಕಟಣೆ ಹೊರಡಿಸಿದೆ.

ಅಂತ್ಯೋದಯ (ಎಎಸ್‌ವೈ) ಕಾರ್ಡ್ ಫಲಾನುಭವಿಗಳಿಗೆ ಕೇಂದ್ರ ವ್ಯಾಪ್ತಿಯ ಪ್ರತಿ ಕಾರ್ಡಿಗೆ 14 ಕೆ.ಜಿ ಅಕ್ಕಿ ಮತ್ತು 21 ಕೆ.ಜಿ ಜೋಳ., ಪಿ.ಹೆಚ್.ಹೆಚ್ (ಬಿಪಿಎಲ್) ಕಾರ್ಡ್ ಫಲಾನುಭವಿಗಳಿಗೆ ಕೇಂದ್ರ ವ್ಯಾಪ್ತಿಯಲ್ಲಿ ಪ್ರತಿ ಫಲಾನುಭವಿಗೆ 02 ಕೆ.ಜಿ ಅಕ್ಕಿ ಮತ್ತು 03 ಕೆ.ಜಿ ಜೋಳ. ರಾಜ್ಯ ವ್ಯಾಪ್ತಿಯ ಪಡಿತರ ಚೀಟಿದಾರರಿಗೆ 05 ಕೆ.ಜಿ ಅಕ್ಕಿ. ಹಾಗೂ ರಾಜ್ಯ ಸರ್ಕಾರದ ಅನ್ನಭಾಗ್ಯ ಯೋಜನೆಯಡಿ ಹಣದ ಬದಲಿಗೆ ಹೆಚ್ಚುವರಿಯಾಗಿ 05 ಕೆ.ಜಿ ಅಕ್ಕಿಯನ್ನು ಉಚಿತವಾಗಿ ವಿತರಿಸಲಾಗುತ್ತದೆ.

'ಒಂದು ರಾಷ್ಟ್ರ ಒಂದು ಪಡಿತರ ಚೀಟಿ' ಯೋಜನೆಯಡಿ ಯಾವುದೇ ರಾಜ್ಯ/ಜಿಲ್ಲೆಯ ಪಡಿತರ ಚೀಟಿದಾರರು ಯಾವುದೇ ನ್ಯಾಯಬೆಲೆ ಅಂಗಡಿಯಲ್ಲಿ ಪಡಿತರವನ್ನು ಪಡೆಯಬಹುದು.

ನ್ಯಾಯಬೆಲೆ ಅಂಗಡಿಕಾರರು ಕಡಿಮೆ ಪ್ರಮಾಣದ ಪಡಿತರ ವಿತರಣೆ ಮಾಡಿದಲ್ಲಿ, ಹಣ ಕೇಳಿದಲ್ಲಿ ಅಥವಾ ಇತರ ಅಕ್ರಮ ಎಸಗಿದಲ್ಲಿ ಉಚಿತ ಸಹಾಯವಾಣಿ ಸಂಖ್ಯೆ 1967 ಗೆ, ತಹಶೀಲ್ದಾರರ ಕಛೇರಿಗೆ ಅಥವಾ ಉಪನಿರ್ದೇಶಕರ ಕಛೇರಿಗೆ ದೂರು ನೀಡಬಹುದು. ವಿತರಿಸಲಾದ ಪಡಿತರ ಧಾನ್ಯಗಳನ್ನು ಮಾರಾಟ ಮಾಡುವುದು ಅಥವಾ ಸಂಗ್ರಹಣೆ ಮಾಡುವುದು ಕಂಡುಬಂದಲ್ಲಿ, ಮುಕ್ತ ಮಾರುಕಟ್ಟೆ ದರಕ್ಕೆ ದಂಡ ವಿಧಿಸಲಾಗುವುದು ಹಾಗೂ ಪಡಿತರ ಚೀಟಿಯನ್ನು ಆರು ತಿಂಗಳ ಅವಧಿಗೆ ಅಮಾನತುಗೊಳಿಸಲಾಗುವುದು ಎಂದು ಯಾದಗಿರಿ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕರ್ನಾಟಕ ಯುರಾಲಜಿ ಸಂಘದ ಅಧ್ಯಕ್ಷರಾಗಿ ಡಾ.ಶರಣಬಸವೇಶ್ ಆಲೂರ್

ಗದಗ, 9– ಮೂತ್ರಪಿಂಡ ಹಾಗೂ ಮೂತ್ರರೋಗ ಶಸ್ತ್ರಚಿಕಿತ್ಸಕ ಡಾ.ಶರಣಬಸವೇಶ್ ಆಲೂರ್ ಅವರು ಪ್ರಸಕ್ತ ಸಾಲಿನ ಕರ್ನಾಟಕ ಯುರಾಲಜಿ ಸಂಘದ ಚುನಾಯಿತ ಅಧ್ಯಕ್ಷರಾಗಿ (President-Elect) ಆಯ್ಕೆಯಾಗಿದ್ದಾರೆ.

ನಗರದಲ್ಲಿ ಇತ್ತೀಚೆಗೆ ನಡೆದ 31ನೇ ರಾಜ್ಯಮಟ್ಟದ ಕರ್ನಾಟಕ ಯುರಾಲಜಿ ಸಂಘದ ವಾರ್ಷಿಕ ಸಮ್ಮೇಳನದಲ್ಲಿ ನಡೆದ ಚುನಾವಣೆಯಲ್ಲಿ ಡಾ.ಶರಣಬಸವೇಶ್ ಆಲೂರ್ ಅವರನ್ನು ಮುಂದಿನ ಸಾಲಿನ ಅಧ್ಯಕ್ಷರಾಗಿ ಆಯ್ಕೆ ಮಾಡಲಾಯಿತು.



ರಾಜ್ಯದ ಮೂತ್ರರೋಗ ತಜ್ಞರನ್ನು ಒಳಗೊಂಡಿರುವ ಕರ್ನಾಟಕ ಯುರಾಲಜಿ ಸಂಘವು ವೈದ್ಯಕೀಯ ಕ್ಷೇತ್ರದಲ್ಲಿ ಮೂತ್ರಪಿಂಡ ಮತ್ತು ಮೂತ್ರನಾಳ ಸಂಬಂಧಿತ ಕಾಯಿಲೆಗಳ ಕುರಿತು ಅರಿವು, ವೈದ್ಯಕೀಯ ಶಿಕ್ಷಣ ಹಾಗೂ ತಜ್ಞರ ವೃತ್ತಿಪರ ಬೆಳವಣಿಗೆಗೆ ಸಂಬಂಧಿಸಿದ ವಿವಿಧ ಕಾರ್ಯಕ್ರಮಗಳನ್ನು ನಡೆಸುತ್ತಿದೆ.

ಸಂಘದ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಡಾ. ಶರಣಬಸವೇಶ್ ಬಿ. ಆಲೂರ್ ಅವರಿಗೆ ವೈದ್ಯಕೀಯ ಕ್ಷೇತ್ರದ ಗಣ್ಯರು, ಸಹೋದ್ಯೋಗಿಗಳು ಹಾಗೂ ವಿವಿಧ ಸಂಘ–ಸಂಸ್ಥೆಗಳ ಪ್ರತಿನಿಧಿಗಳು ಅಭಿನಂದನೆ ಸಲ್ಲಿಸಿದ್ದಾರೆ.

# ಪ್ರೊಮೋಷನ್ ಬೇಕಿದ್ರೆ ಸರ್ಕಾರಿ ನೌಕರರು ತಮ್ಮ ಆಸ್ತಿ ವಿವರ ಸಲ್ಲಿಸುವುದು ಕಡ್ಡಾಯ, ತಮಿಳುನಾಡು ಸರ್ಕಾರ ಮಹತ್ವದ ಆದೇಶ, ಅಕ್ಟೋಬರ್ 31 ಕಡೆ ದಿನ



ಚೆನ್ನೈ,09: ತಮಿಳುನಾಡು ಸರ್ಕಾರವು ಆಡಳಿತದಲ್ಲಿ ಪಾರದರ್ಶಕತೆ ತರಲು ಮತ್ತು ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲು ಮಹತ್ವದ ಹೆಜ್ಜೆ ಇಟ್ಟಿದೆ. ರಾಜ್ಯದ ಎಲ್ಲಾ ಸರ್ಕಾರಿ ನೌಕರರು ಬಡ್ತಿ ಪಡೆಯಬೇಕಾದರೆ ತಮ್ಮ ಸಮಗ್ರ ಆಸ್ತಿ ವಿವರಗಳನ್ನು ಬಹಿರಂಗಪಡಿಸುವುದನ್ನು ಕಡ್ಡಾಯಗೊಳಿಸಿ ಆದೇಶ ಹೊರಡಿಸಿದೆ. ನೌಕರರು ತಮ್ಮ ಚರ–ಸ್ಥಿರ ಆಸ್ತಿ, ಉಳಿತಾಯ ಹಾಗೂ ಸಾಲದ ಮಾಹಿತಿಯನ್ನು ಅಕ್ಟೋಬರ್ 31 ರೊಳಗೆ ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಬೇಕೆಂದು ಕಟ್ಟುನಿಟ್ಟಿನ ಗಡುವು ನೀಡಲಾಗಿದೆ.

ತಮಿಳುನಾಡು ಸರ್ಕಾರವು ಸರ್ಕಾರಿ ನೌಕರರ ಬಡ್ತಿಗಾಗಿ ಆಸ್ತಿ ವಿವರ ಸಲ್ಲಿಸುವುದನ್ನು ಕಡ್ಡಾಯಗೊಳಿಸಿದೆ. ಆಡಳಿತದಲ್ಲಿ ಪಾರದರ್ಶಕತೆ ತರಲು ಮತ್ತು ಭ್ರಷ್ಟಾಚಾರ ನಿಯಂತ್ರಿಸಲು ಈ ಮಹತ್ವದ ಆದೇಶ ಹೊರಡಿಸಿದೆ. ನೌಕರರು ಅಕ್ಟೋಬರ್ 31 ರೊಳಗೆ ತಮ್ಮ ಚರ–ಸ್ಥಿರ ಆಸ್ತಿ, ಸಾಲದ ಮಾಹಿತಿಗಳನ್ನು ಖಈಊಖಒಖ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬೇಕು. ಮಾಹಿತಿ ನೀಡದವರಿಗೆ ಬಡ್ತಿ ದೊರೆಯುವುದಿಲ್ಲ, ಶಿಸ್ತು ಕ್ರಮ ಎದುರಿಸಬೇಕಾಗುತ್ತದೆ.

ಬಡ್ತಿಗೆ ಆಸ್ತಿ ವಿವರವೇ ಮಾನದಂಡನಿಗದಿತ ಗಡುವಿನೊಳಗೆ ಆಸ್ತಿ ವಿವರ ಸಲ್ಲಿಸುವ ನೌಕರರ ಹೆಸರುಗಳನ್ನು ಮಾತ್ರ ಮುಂದಿನ ಬಡ್ತಿ ಪರಿಗಣನಾ ಪಟ್ಟಿಗೆ ಸೇರಿಸಲಾಗುತ್ತದೆ. ಮಾಹಿತಿ ನೀಡದವರಿಗೆ ಬಡ್ತಿ ಭಾಗ್ಯ ಇರುವುದಿಲ್ಲ. ಕೇವಲ ಸ್ವಂತ ಹೆಸರಿನಲ್ಲಿರುವ ಆಸ್ತಿ ಮಾತ್ರವಲ್ಲದೆ, ಬೇರೆಯವರ ಹೆಸರಿನಲ್ಲಿ (ಬೇನಾಮಿ ಅಥವಾ ಕುಟುಂಬ ಸದಸ್ಯರ ಹೆಸರಿನಲ್ಲಿ) ಖರೀದಿಸಿರುವ ಆಸ್ತಿ ವಿವರಗಳನ್ನೂ ನಮೂದಿಸಬೇಕು. ಜೊತೆಗೆ ಆ ವ್ಯಕ್ತಿಯೊಂದಿಗಿನ ಸಂಬಂಧವನ್ನೂ ಸ್ಪಷ್ಟವಾಗಿ ನಮೂದಿಸುವುದು ಕಡ್ಡಾಯ.

ನಿಯಮ ಉಲ್ಲಂಘನೆ ಎಂದು ಪರಿಗಣನೆ:ಅಕ್ಟೋಬರ್ 31 ರೊಳಗೆ ಮಾಹಿತಿ ನೀಡಲು ವಿಫಲರಾಗುವ ನೌಕರರನ್ನು 'ಸರ್ಕಾರಿ ನೌಕರರ ನಡವಳಿಕೆ ನಿಯಮಾವಳಿ'ಯನ್ನು ಉಲ್ಲಂಘಿಸಿದವರು ಎಂದು ಪರಿಗಣಿಸಿ ಶಿಸ್ತು ಕ್ರಮ ಕೈಗೊಳ್ಳಲಾಗುತ್ತದೆ. ನೌಕರರು ಸರ್ಕಾರದ ಅಧಿಕೃತ ಪೋರ್ಟಲ್ ಆದ IFHRMS (ಸಮಗ್ರ ಹಣಕಾಸು ಮತ್ತು ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆ) ವೆಬ್‌ಸೈಟ್‌ಗೆ ಲಾಗಿನ್ ಆಗಿ ಈ ವಿವರಗಳನ್ನು ಸಲ್ಲಿಸಬೇಕು.

ಆಡಳಿತ ಸುಧಾರಣೆ ಮುಖ್ಯ ಕಾರ್ಯದರ್ಶಿ ಸಾಯಿಕುಮಾರ್ ಹೊರಡಿಸಿರುವ ಈ ಸುತ್ತೋಲೆಯು ನೌಕರರ ಆದಾಯ ಮೀರಿ ಆಸ್ತಿ ಗಳಿಕೆ ತಡೆಯುವಲ್ಲಿ ಪ್ರಮುಖ ಪಾತ್ರ ವಹಿಸಲಿದೆ. ಕೇಂದ್ರ ಲೋಕಸೇವಾ ಆಯೋಗದ ಅಧಿಕಾರಿಗಳಿಗೆ ವಾರ್ಷಿಕ ಆಸ್ತಿ ವಿವರ ಸಲ್ಲಿಕೆ ಕಡ್ಡಾಯವಾಗಿರುವಂತೆಯೇ, ಈಗ ರಾಜ್ಯ ಮಟ್ಟದ ಎಲ್ಲಾ ನೌಕರರಿಗೂ ಇದನ್ನು ಬಡ್ತಿಯೊಂದಿಗೆ ನೇರವಾಗಿ ಲಿಂಕ್ ಮಾಡಲಾಗಿದೆ.

IFHRMS ವ್ಯವಸ್ಥೆಯ ಮೂಲಕ ಆಸ್ತಿ ವಿವರಗಳು ವೇತನ, ಪಿಂಚಣಿ ಮತ್ತು ಸೇವಾ ದಾಖಲೆಗಳ ಜೊತೆ ಡಿಜಿಟಲ್ ರೂಪದಲ್ಲಿ ಜೋಡಣೆಯಾಗುವುದರಿಂದ ಸುಳ್ಳು ಮಾಹಿತಿ ನೀಡುವುದು ಅಥವಾ ಆಸ್ತಿ ಮುಚ್ಚಿಡುವುದು ಕಷ್ಟಕರವಾಗಲಿದೆ.

# ಕ.ವಿ.ಮಂ.ನಿವೃತ್ತ ನೌಕರರ ಮಾಸಿಕ ಸಭೆಯಲ್ಲಿ ದತ್ತಿ ಉಪನ್ಯಾಸ



ಗದಗ, 9– ಕ.ವಿ.ಮಂ. ನಿವೃತ್ತ ನೌಕರರ ಮಾಸಿಕ ಸಭೆ ನೂತನ ಸಮುದಾಯ ಭವನದಲ್ಲಿ ಜಿ.ಎಂ. ಯಾನಮಶೆಟ್ಟಿ ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಲಿಂಗೈಕ್ಯ ಎ.ಎನ್.ಬಸ್ತಿ ಅವರ ಪ್ರಥಮ ವರ್ಷದ ಸ್ಮರಣೋತ್ಸವ ಪ್ರಯುಕ್ತ ದತ್ತಿ ಉಪನ್ಯಾಸ ಸಹಕಾರಿ ಇಲಾಖೆಯ ನಿವೃತ್ತ ನಿಭಂಧಕರಾದ ಬಿ.ಎಂ.ಬಿಳೇಯಲಿ ಅವರು ಆಗಮಿಸಿ ಅವರ ಬಾಲ್ಯ ಜೀವನ, ಶಿಕ್ಷಣ, ವೃತ್ತಿ ಜೀವನ ವಿದೇಶಿ ಪ್ರವಾಸ ಹಾಗೂ ದಾಂಪತ್ಯ ಜೀವನದ ಬಗ್ಗೆ ವಿವರವಾಗಿ ಹೇಳಿದರು. ನಿವೃತ್ತ ಪ್ರಾಂಶುಪಾಲರಾದ ಎಂ.ಸಿ.ವಗ್ಗಿ ಅವರು ಎ.ಎನ್.ಬಸ್ತಿಯವರು ಹಲವಾರು ಸಂಘಟನೆಗಳಲ್ಲಿ ಸಲ್ಲಿಸಿದ ಸೇವೆಯನ್ನು ವಿವರಿಸಿದರು. ಆರ್.ಸಿ.ನಾರಾಯಣಪುರ ಅವರು ಸಂದರ್ಭೋಚಿತವಾಗಿ ಮಾತನಾಡಿದರು. ದಾಸೋಹಿಗಳಾದ ರಾಜು ಬಸ್ತಿ ಅವರು ತಮ್ಮ ತಂದೆಯ ಕೌಟುಂಬಿಕ ಪ್ರೀತಿಯನ್ನು ಬಣ್ಣನೆ ಮಾಡಿದರು. ಅತಿಥಿಗಳು ಹಾಗೂ ದಾಸೋಹಿಗಳಿಗೆ ಶಾಲು ಹೊದಿಸಿ ಫಲಪುಷ್ಪ ನೀಡಿ ಗೌರವಪೂರ್ವಕ ಸನ್ಮಾನಿಸಲಾಯಿತು. ಎಸ್.ಬಿ.ಓಲಿ ಕೇಂದ್ರ ಸಮಿತಿಯ ಸಭೆಯಲ್ಲಿ ನಡೆದ ಚಟುವಟಿಕೆಗಳ ಬಗ್ಗೆ ವಿವರವಾದ ಮಾಹಿತಿ ನೀಡಿದರು. ವಾಯ್.ಬಿ. ಭಾನಾಪೂರ ಅವರು ಶರಾವತಿ ಪತ್ತಿನ ಸಹಕಾರಿ ಸಂಘ ಹಾಗೂ ಸಮುದಾಯ ಭವನದ ವಿವರವಾದ ಮಾಹಿತಿ ನೀಡಿದರು.

ಈ ತಿಂಗಳಲ್ಲಿ ಜನಿಸಿದ ಸದಸ್ಯರ ಹುಟ್ಟು ಹಬ್ಬ ಆಚರಿಸಲಾಯಿತು. ಜಿ.ಆರ್. ಅಗಸಿಯವರ, ಬಿ.ಎಚ್.ಜಾಲಿಹಾಳ, ಎಸ್.ಎಂ.ಹಿರೇಮಠ, ಆರ್.ಜಿ.ಕುಲಕರ್ಣಿ, ಆರ್.ಎಂ. ಹಿತ್ತಲಮನಿ, ಎಸ್.ಆರ್. ಕಲಾಲ, ಎಸ್.ಎಸ್.ಹಿರೇಮಠ, ವ್ಹಿ.ಆರ್. ದೇಸಾಯಿಪಟ್ಟಿ, ನಾಗನಗೌಡ ಚಿಕ್ಕಣ್ಣವರ, ಜೆ.ಡಿ.ನದಾಫ, ಎಸ್.ಎಫ್.ಸೈದಾಪೂರ, ಎಂ.ಜಿ.ಫತ್ತೇನವರ, ಜನ್ನುಸಾಬ ಉಮಚಗಿ, ಎಸ್.ಎಂ.ನಾಗಸಮುದ್ರ, ಎ.ವ್ಹಿ.ಹಿರೇಮಠ, ಎಚ್.ಬಿ.ಜೋಗಿ, ಎಚ್.ಎಚ್. ಕೊರ್ಲಹಳ್ಳಿ, ಹಾಗೂ ಇತರರು ಸಭೆಯಲ್ಲಿ ಉಪಸ್ಥಿತರಿದ್ದರು. ಎನ್.ಎಂ.ಬಾಗಲಿ ಹಾಗೂ ವ್ಹಿ.ಎಲ್. ಅಯ್ಯನಗೌಡರ ಪ್ರಾರ್ಥಿಸಿದರು. ವ್ಹಿ.ಎಫ್. ಹೊಸಮನಿ ಸ್ವಾಗತಿಸಿದರು. ಜಿ.ಎನ್. ಹವಳೆ ವಂದಿಸಿದರು. ವಾಯ್.ಬಿ. ಭಾನಾಪೂರ ನಿರೂಪಿಸಿದರು ಎಂದು ಕಾರ್ಯದರ್ಶಿ ಬಿ.ಎನ್.ಫಾಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕೊಪ್ಪಳ, ರಾಯಚೂರು ಜಿಲ್ಲೆಗಳ ಅಧಿಕಾರಿಗಳೊಂದಿಗೆ ಉಪ ಮುಖ್ಯಮಂತ್ರಿಗಳ ಸಭೆ; ಬರ ಪರಿಸ್ಥಿತಿಯ ಅವಲೋಕನ

ಕೊಪ್ಪಳ 9– ಕೊಪ್ಪಳ ಹಾಗೂ ರಾಯಚೂರು ಜಿಲ್ಲೆಗಳಲ್ಲಿ ಅಕ್ಟೋಬರ್ 08ರಂದು ಪ್ರವಾಸ ಕೈಗೊಂಡು ರೈತರ ಜಮೀನಿಗೆ ಖುದ್ದು ಭೇಟಿ ನೀಡಿ ಬೆಳೆಹಾನಿ ವೀಕ್ಷಿಸಿದ ಉಪ ಮುಖ್ಯಮಂತ್ರಿಗಳಾದ ಡಾ.ಜಿ.ಪರಮೇಶ್ವರ ಅವರು ಮಧ್ಯಾಹ್ನ 4 ಗಂಟೆಯ ನಂತರ ಕೊಪ್ಪಳ ಹಾಗೂ ರಾಯಚೂರು ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಸಿಇಓ. ಕೃಷಿ, ತೋಟಗಾರಿಕೆ, ಪಶುಪಾಲನಾ, ರೇಷ್ಮೆ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಬಿತ್ತನೆ ಪ್ರಮಾಣ, ಮಳೆಯ ವಿವರ, ಬೆಳೆ ಹಾನಿ ಪ್ರಮಾಣ ಸೇರಿದಂತೆ ನಾನಾ ವಿಷಯಗಳ ಬಗ್ಗೆ ಅಧಿಕಾರಿಗಳಿಂದ ನಿಖರ ಅಂಕಿಅಂಶಗಳ ಮಾಹಿತಿ ಪಡೆದುಕೊಂಡರು.



ಬರ ಪರಿಸ್ಥಿತಿಯ ಹಿನ್ನೆಲೆಯಲ್ಲಿ, ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ತಂಗಡಗಿ, ಕುಷ್ಟಗಿ ವಿಧಾನಸಭಾ ಕ್ಷೇತ್ರದ ಶಾಸಕರಾದ ದೊಡ್ಡನಗೌಡ ಪಾಟೀಲ, ಕೊಪ್ಪಳ ವಿಧಾನಸಭಾ ಕ್ಷೇತ್ರದ ಶಾಸಕರಾದ ಕೆ ರಾಘವೇಂದ್ರ ಹಿಟ್ನಾಳ ಅವರ ಸಮ್ಮುಖದಲ್ಲಿ ಜಿಲ್ಲಾ ಪಂಚಾಯತ್ ಕಚೇರಿ ಸಭಾಂಗಣದಲ್ಲಿ ಸಭೆ ನಡೆಸಿ ಮಾತನಾಡಿದ ಉಪ ಮುಖ್ಯಮಂತ್ರಿಗಳು, ಕುಡಿವ ನೀರು, ಮೇವಿನ ಲಭ್ಯತೆಯ ಬಗ್ಗೆ ಮೊದಲಿಗೆ ಎರಡೂ ಜಿಲ್ಲೆಗಳ ಅಧಿಕಾರಿಗಳಿಂದ ಮಾಹಿತಿ ಕೇಳಿದರು.

ಕೊಪ್ಪಳ ಜಿಲ್ಲೆಯಲ್ಲಿ 152 ಗ್ರಾಮ ಪಂಚಾಯತಗಳ ಪೈಕಿ 45 ಹಳ್ಳಿಗಳಿಗೆ 55 ಖಾಸಗಿ ಬೋರವೆಲಗಳ ಮೂಲಕ ನೀರು ಪೂರೈಸಲಾಗುತ್ತಿದೆ. ಪಿಡಿ ಖಾತೆಯಲ್ಲಿ ಲಭ್ಯವಿರುವ 4 ಕೋಟಿ ರೂ ಅನುದಾನದ ಪೈಕಿ ಈಗಾಗಲೇ 3.20 ಕೋಟಿ ರೂ ಬಳಸಿದ್ದೇವೆ. ಸರ್ಕಾರದ ನಿರ್ದೇಶನದಂತೆ ಮತ್ತೆ 1 ಕೋಟಿ ರೂ.ಗೆ ಕ್ರಿಯಾಯೋಜನೆ ಮಾಡಿದ್ದೇವೆ. ನಗರ ಪ್ರದೇಶಗಳಲ್ಲಿ ಕುಡಿವ ನೀರಿನ ಸಮಸ್ಯೆ ಕಂಡು ಬಂದಿಲ್ಲ. ಮುಂದಿನ ದಿನಗಳಲ್ಲಿ ಅಂ–ದಾಜು 109 ಗ್ರಾಮಗಳಲ್ಲಿ ಕುಡಿವ ನೀರಿನ ಸಮಸ್ಯೆ ಎದುರಾಗಲಿದೆ ಎಂದು ಅಂದಾಜಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳಾದ ಡಾ.ಸುರೇಶ ಇಟ್ನಾಳ ಅವರು ಸಭೆಗೆ ಮಾಹಿತಿ ನೀಡಿದರು.

ಮಳೆಯಾಗದಿದ್ದರೆ ರಾಯಚೂರು ಜಿಲ್ಲೆಯಲ್ಲಿ ಡಿಸೆಂಬರ್ ನಂತರ ತೊಂದರೆಯಾಗಲಿದೆ. ಕುಡಿವ ನೀರಿಗೆ ನೀಡಿದ ಅನುದಾನವನ್ನು ಸಮರ್ಪಕವಾಗಿ ಬಳಸುತ್ತಿದ್ದೇವೆ ಎಂದು ರಾಯಚೂರು ಜಿಲ್ಲಾಧಿಕಾರಿ ಪೂವಿಕಾ ಅವರು ಸಭೆಗೆ ಮಾಹಿತಿ ನೀಡಿದರು.

ಈ ವೇಳೆ ಮಾತನಾಡಿದ ಉಪ ಮುಖ್ಯಮಂತ್ರಿಗಳು, ಮತ್ತೊಂದು ರೌಂಡನಲ್ಲಿ ತಲಾ ಒಂದು ಕೋಟಿ ರೂ.ಗಳನ್ನು ಎಲ್ಲಾ ಜಿಲ್ಲೆಗಳಿಗೆ ಕುಡಿವ ನೀರಿಗೆ ಕೊಡುವ ಯೋಚನೆ ಇದೆ. ಯಾವುದೇ ರೀತಿಯಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ ಕುಡಿವ ನೀರಿಗೆ ತೊಂದರೆಯಾಗಬಾರದು ಎಂದು ಸೂಚನೆ ನೀಡಿದರು. ಸಮರ್ಪಕ ಕುಡಿವ ನೀರಿನ ಸರಬರಾಜಿಗೆ ಸಂಬಂಧಿಸಿದಂತೆ ಕ್ರಿಯಾಯೋಜನೆ ರೂಪಿಸಲು ನಿರ್ದೇಶನ ನೀಡಿದರು.

ಮೇವಿನ ಕಿಟ್ ವಿತರಣೆ: ಕೊಪ್ಪಳ ಜಿಲ್ಲೆಯಲ್ಲಿ 30 ವಾರಗಳಿಗೆ ಸಾಕಾಗುವಷ್ಟು ಮೇವಿನ ಲಭ್ಯತೆ ಇದೆ. ಡಿಸೆಂಬರ್ ನಂತರ ಮೇವಿಗೆ ತೊಂದರೆಯಾಗಲಿದೆ ಎಂದು ಪಶುಪಾಲನಾ ಇಲಾಖೆಯ ಉಪ ನಿರ್ದೇಶಕರು ಸಭೆಗೆ ಮಾಹಿತಿ ನೀಡಿದರು. ಜಾನುವಾರುಗಳಿಗೆ ಅನುಕೂಲವಾಗುವಂತೆ ಜಾನುವಾರುಗಳು ಹಾಗೂ ನೀರಾವರಿ ಸೌಲಭ್ಯ ಹೊಂದಿರುವ ಅರ್ಹ ರೈತರಿಗೆ ಸಮರ್ಪಕವಾಗಿ ಮೇವಿನ ಬೀಜಗಳ ಮಿನಿಕಿಟ್ ವಿತರಣೆಯನ್ನು ಸರಿಯಾಗಿ ನೀಡಬೇಕು ಎಂದು ಉಪ ಮುಖ್ಯಮಂತ್ರಿಗಳು ಸೂಚನೆ ನೀಡಿದರು.

ಗುಳೆಹೋಗಲು ಬಿಡಬೇಡಿ: ಜಿಲ್ಲಾಧಿಕಾರಿಗಳು ಹಾಗೂ ಜಿಪಂ ಸಿಇಓ ಅವರು ವಿಶೇಷ ಮುತುವರ್ಜಿ ವಹಿಸಿ ಕೂಲಿ ಕೆಲಸ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಹೆಚ್ಚಿನ ಒತ್ತು ನೀಡಿದಲ್ಲಿ ಜನರಿಗೆ ಉದ್ಯೋಗ ಲಭ್ಯವಾಗಿ ಜನರು ಗುಳೆ ಹೋಗುವುದು ತಪ್ಪಲಿದೆ ಎಂದು ಉಪ ಮುಖ್ಯಮಂತ್ರಿಗಳು ನಿರ್ದೇಶನ ನೀಡಿ–ದರು. ವಿಳಂಬಕ್ಕೆ ಅವಕಾಶವಿಲ್ಲದಂತೆ ಕೂಲಿ ಹಣ ಪಾವತಿಗೆ ಒತ್ತು ಕೊಡಬೇಕು ಎಂದು ಅವರು ಸೂಚನೆ ನೀಡಿದರು.

ಬೆಳೆವಿಮೆ ಪಾವತಿಗೆ ಒತ್ತು ಕೊಡಿ: ಕೊಪ್ಪಳ ಜಿಲ್ಲೆಯಲ್ಲಿ ಈಗಾಗಲೇ 1.56 ಲಕ್ಷ ರೈತರು ಬೆಳೆವಿಮೆಗೆ ಹೆಸರು ನೋಂದಾಯಿಸಿದ್ದಾರೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ನೋಂದಣಿ ಪ್ರಮಾಣ ಹೆಚ್ಚಿದೆ. ರಾಯಚೂರು ಜಿಲ್ಲೆಯಲ್ಲಿ ಇದುವರೆಗೆ 1.32 ಲಕ್ಷ ರೈತರು ಬೆಳೆವಿಮೆಗೆ ಹೆಸರು ನೋಂದಾಯಿಸಿದ್ದಾರೆ ಎಂದು ಕೊಪ್ಪಳ ಹಾಗೂ ರಾಯಚೂರು ಜಂಟಿ ಕೃಷಿ ನಿರ್ದೇಶಕರು ಸಭೆಗೆ ಮಾಹಿತಿ ನೀಡಿದರು. ತಪ್ಪಿತಸ್ಥರ ಮೇಲೆ ಎಫ್‌ಐಆರ್ ದಾಖಲಿಸಿ ಮಧ್ಯವರ್ತಿಗಳ ಹಾವಳಿಗೆ ಕಡಿವಾಣ ಹಾಕಿ ರೈತರಿಗೆ ಸಮರ್ಪಕವಾಗಿ ಬೆಳೆವಿಮೆ ಹಣ ಪಾವತಿಯಾಗುವಂತೆ ನೋಡಿಕೊಳ್ಳಲು ಉಪ ಮುಖ್ಯಮಂತ್ರಿಗಳು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ವಿದ್ಯುತ್ ವ್ಯತ್ಯಯ ತಪ್ಪಿಸಿ: ಕೊಪ್ಪಳ ಹಾಗೂ ರಾಯಚೂರು ಜಿಲ್ಲೆಗಳಲ್ಲಿ ಕ್ಷೇತ್ರ ಭೇಟಿ ಸಂದರ್ಭದಲ್ಲಿ ಬಹುತೇಕ ರೈತರು ವಿದ್ಯುತ್ ಸಮಸ್ಯೆಯಾಗಿದೆ ಎಂದು ಅಹವಾಲು ಸಲ್ಲಿಸಿದ್ದಾರೆ ಎಂದು ಉಪ ಮುಖ್ಯಮಂತ್ರಿಗಳು ಜೆಸ್ಕಾಂ ಅಧಿಕಾರಿಗಳಿಂದ ವಿವರಣೆ ಕೇಳಿದರು. ವಿದ್ಯುತ್ ಪದೇಪದೆ ಕಡಿತವಾಗುತ್ತಿದೆ. ಇದರಿಂದ ತೊಂದರೆ–ಯಾಗುತ್ತಿದೆ ಎಂದು ರೈತರಿಂದ ದೂರುಗಳು ಬಂದದ್ದು ಸತ್ಯ. ಈ ಬಗ್ಗೆ ಎಂಡಿ ಅವರಿಗೆ ಮಾತನಾಡಿದ್ದೇನೆ ಎಂದು ಸಚಿವರು ಸಭೆಗೆ ತಿಳಿಸಿದರು. ಯಾವುದೇ ನೆಪ ಹೇಳದೇ, ರೈತರಿಗೆ ತೊಂದ–ರೆಯಾಗದಂತೆ ಸಮರ್ಪಕ ವಿದ್ಯುತ್ ಪೂರೈಕೆಗೆ ಒತ್ತು ಕೊಡಬೇಕು ಎಂದು ಉಪ ಮುಖ್ಯಮಂತ್ರಿಗಳು ಜೆಸ್ಕಾಂ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಡಿಎಚ್‌ಓ ಅವರಿಗೆ ನಿರ್ದೇಶನ: ಮಳೆ ಕೊರತೆ ಮುಂದುವರೆದು, ಬಿಸಿಲು ಏರಿಕೆಯಾದಂತೆ ಜನರಿಗೆ ಅನಾರೋಗ್ಯ ಸಮಸ್ಯೆ ಕಾಣುತ್ತದೆ. ಟ್ಯಾಂಕರ್ ನೀರು ಪರೀಕ್ಷಿಸಿ ಪೂರೈಸಬೇಕು. ಜನರ ಆರೋಗ್ಯ ಮೇಲ್ವಿಚಾರಣೆಗಾಗಿ ನಿಯಮಿತ ಸಭೆ ನಡೆಸಿ ಎಂದು ಉಪ ಮುಖ್ಯಮಂತ್ರಿಗಳು ಡಿಎಚ್‌ಓ ಅವರಿಗೆ ಸೂಚನೆ ನೀಡಿದರು.

ದೌರ್ಜನ್ಯ ನಡೆಸಿದರೆ ಕ್ರಮ: ಕಿರು ಸಾಲ ಅಥವಾ ಸಣ್ಣ ಸಾಲ ನೀಡುವ ಸಂಸ್ಥೆಗಳಿಂದ ಬಡ ಜನರ ಮೇಲೆ ನಡೆಯುವ ಬಲವಂತದ ವಸೂಲಿ ಹಾಗೂ ಮಾನಸಿಕ ಕಿರುಕಳ ನಡೆಯುದನ್ನು ನಾವು ಖಂಡಿಸುತ್ತೇವೆ. ಬರ ಎದುರಾದ ಈ ಪರಿಸ್ಥಿತಿಯಲ್ಲಿ ಸಾಲ ವಸೂಲಾತಿ ಕಿರುಕುಳ ಪ್ರಕರಣಗಳು ಮರುಕಳಿಸಿದಲ್ಲಿ ತಪ್ಪಿತಸ್ಥರ ಮೇಲೆ ಮುಲಾಜಿಲ್ಲದೇ ಕ್ರಮ ಜರುಗಿಸುವುದಾಗಿ ಉಪ ಮುಖ್ಯಮಂತ್ರಿಗಳು ಎಚ್ಚರಿಕೆ ನೀಡಿದರು.

ನಿಯಮಿತ ಕ್ಷೇತ್ರ ಭೇಟಿ ನಡೆಸಿ: ಬೇರೆ ಬೇರೆ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಕಚೇರಿಯಲ್ಲಿ ಕೂಡದೇ ನಿಯಮಿತವಾಗಿ ಕ್ಷೇತ್ರ ಭೇಟಿ ನಡೆಸಿ ಜನತೆಗೆ ಸ್ಪಂದನೆ ನೀಡಬೇಕು. ರಾಜ್ಯದಲ್ಲಿ ಈಗ ಮುಂದುವರೆದ ಬರದ ಸವಾಲನ್ನು ನಾವು ನೀವು ಸೇರಿ ಎದುರಿಸಬೇಕು. ಈ ದಿಶೆಯಲ್ಲಿ ಅಧಿಕಾರಿ ವರ್ಗದ ಸಮನ್ವಯತೆ ತುಂಬಾ ಮುಖ್ಯ. ಅಧಿಕಾರಿಗಳು ಅಸಡ್ಡೆಯಿಂದ ವರ್ತಿಸಿ, ಕ್ಷೇತ್ರ ಭೇಟಿ ನಡೆಸದೇ, ಮಾಹಿತಿ ಕೊಡುವಲ್ಲಿ ನಿರ್ಲಕ್ಷ್ಯ ತೋರಿದಲ್ಲಿ ಅಂತವರ ಮೇಲೆ ಕ್ರಮಕ್ಕಾಗಿ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಹಿಂದೆಮುಂದೆ ನೋಡುವುದಿಲ್ಲ ಎಂದು ಉಪ ಮುಖ್ಯಮಂತ್ರಿಗಳು ಎಚ್ಚರಿಕೆ ನೀಡಿದರು.

ಬೆಳೆಹಾನಿ ಪರಿಶೀಲನೆ: ಕೊಪ್ಪಳ ಜಿಲ್ಲೆಯಲ್ಲಿ ಒಟ್ಟು 3.49 ಲಕ್ಷ ಹೆಕ್ಟೇರ್ ಬಿತ್ತನೆ ಗುರಿ ಪೈಕಿ, 3.14 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಬೆಳೆಗಳ ಬಿತ್ತನೆಯಾಗಿದೆ. ಮುಂಗಾರು ಹಂಗಾಮಿನ ವಾಡಿಕೆ ಮಳೆ 383 ಮೀ ಮೀ ಇದ್ದು, ವಾಸ್ತವವಾಗಿ 207 ಮಿ ಮಿ ಮಳೆಯಾಗಿದೆ. ಪ್ರತಿ ಶತ 45 ಮಳೆ ಕೊರತೆಯಾಗಿದೆ. ಜಿಲ್ಲೆಯಲ್ಲಿ ಒಟ್ಟು 44,000 ಹೆಕ್ಟೇರ್ ಪ್ರದೇಶವು ತೋಟಗಾರಿಕಾ ಬೆಳೆಗಳ ವಿಸ್ತೀರ್ಣವಿದ್ದು, ಪ್ರಸ್ತಕ ಸಾಲಿನಲ್ಲಿ ಒಟ್ಟು 15,000 ಹೆಕ್ಟೇರ್ ಪ್ರದೇಶದ ಗುರಿಯ ಪೈಕಿ ಇದುವರೆಗೆ 12,000 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದೆ. ಮುಂಗಾರು ಹಂಗಾಮಿನಲ್ಲಿ 2.94 ಲಕ್ಷ ಹೆಕ್ಟೇರ್ ಕೃಷಿ ಬೆಳೆಗಳು ಹಾಗೂ 8300 ಹೆಕ್ಟೇರ್ ತೋಟಗಾರಿಕಾ ಬೆಳೆಗಳು ಸೇರಿ ಇದುವರೆಗೆ ಒಟ್ಟು 3.02 ಲಕ್ಷ ಹೆಕ್ಟೇರ್ ಬೆಳೆ ಹಾನಿಯಾದ ಬಗ್ಗೆ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಲಾಗಿದೆ ಕೊಪ್ಪಳ ಜಿಲ್ಲಾಧಿಕಾರಿಗಳು ಮಾಹಿತಿ ನೀಡಿದರು.

ರಾಯಚೂರು ಜಿಲ್ಲೆಯಲ್ಲಿ ಒಟ್ಟು 5,72,375 ಲಕ್ಷ ಹೆಕ್ಟೇರ್ ಬಿತ್ತನೆ ಗುರಿಯ ಪೈಕಿ ಇದುವರೆಗೆ 4,82,498 ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಬೆಳೆಗಳ ಬಿತ್ತನೆಯಾಗಿದೆ. ಮುಂಗಾರು ಹಂಗಾಮಿನ ವಾಡಿಕೆ ಮಳೆ 440 ಮೀ ಮೀ ಇದ್ದು, ವಾಸ್ತವವಾಗಿ 197 ಮಿ ಮಿ ಮಳೆ ಬಿದ್ದು, ಪ್ರತಿ ಶತ 48 ಮಳೆ ಕೊರತೆಯಾಗಿದೆ. ರಾಯಚೂರು ಜಿಲ್ಲೆಯಲ್ಲಿ ಒಟ್ಟು 26,000 ಹೆಕ್ಟೇರ್ ಪ್ರದೇಶವು ತೋಟಗಾರಿಕಾ ಬೆಳೆಗಳ ವಿಸ್ತೀರ್ಣವಿದ್ದು, ಪ್ರಸ್ತಕ ಸಾಲಿನಲ್ಲಿ ಒಟ್ಟು 19,808 ಹೆಕ್ಟೇರ್ ಪ್ರದೇಶದ ಗುರಿಯ ಪೈಕಿ ಇದುವರೆಗೆ 7604 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದೆ. ಮುಂಗಾರು ಹಂಗಾಮಿನಲ್ಲಿ 2,80,665 ಲಕ್ಷ ಹೆಕ್ಟೇರ್ ಕೃಷಿ ಬೆಳೆಗಳು ಹಾಗೂ 680.09 ಹೆಕ್ಟೇರ್ ತೋಟಗಾರಿಕಾ ಬೆಳೆಗಳು ಹಾನಿಯಾದ ಬಗ್ಗೆ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಲಾಗಿದೆ ಎಂದು ರಾಯಚೂರು ಜಿಲ್ಲಾಧಿಕಾರಿ ಪೂವಿಕಾ ಅವರು ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿ ಅಟಲ್ ಜನಸ್ನೇಹಿ ಕೇಂದ್ರದ ರಾಜ್ಯ ನಿರ್ದೇಶಕರಾದ ಎಂ ಎಸ್ ದಿವಾಕರ, ಜಿಲ್ಲಾ ಪಂಚಾಯತ್ ಸಿಇಓ ಕೊಪ್ಪಳದ ವರ್ಣಿತ್ ನೇಗಿ, ರಾಯಚೂರಿನ ಈಶ್ವರ ಕುಮಾರ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಸಾಹಿಲ್ ಬಾಗ್ಲಾ, ಅಪರ ಜಿಲ್ಲಾಧಿಕಾರಿಗಳಾದ ಸಿದ್ರಾಮೇಶ್ವರ, ರಾಯಚೂರು ಸಹಾಯಕ ಆಯುಕ್ತರಾದ ಡಾ.ಹಂಪಣ್ಣ ಸಜ್ಜನ್, ಕೊಪ್ಪಳ ಜಿಪಂ ಉಪ ಕಾರ್ಯದರ್ಶಿ ಕೃಷ್ಣಮೂರ್ತಿ, ರಾಯಚೂರು ಜಿಪಂ ಉಪ ಕಾರ್ಯದರ್ಶಿ ಹಾಲಸಿದ್ದಪ್ಪ ಪೂಜಾರಿ, ಕೊಪ್ಪಳ ಜಂಟಿ ಕೃಷಿ ನಿರ್ದೇಶಕರಾದ ಕೃಷ್ಣಮೂರ್ತಿ, ಜಂಟಿ ತೋಟಗಾರಿಕಾ ನಿರ್ದೇಶಕರಾದ ಕೃಷ್ಣ ಉಕ್ಕುಂದ, ರಾಯಚೂರು ಜಂಟಿ ಕೃಷಿ ನಿರ್ದೇಶಕರಾದ ಪ್ರಕಾಶ ಚವ್ಹಾಣ, ತೋಟಗಾರಿಕಾ ಜಂಟಿ ನಿರ್ದೇಶಕರಾದ ಮಹಮ್ಮದ್ ಅಲಿ, ಕೊಪ್ಪಳ ಹಾಗೂ ರಾಯಚೂರು ತಾಲೂಕಿನ ತಹಸೀಲ್ದಾರಗಳು, ತಾಲೂಕು ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿಗಳು, ಕಂದಾಯ, ಪಶುಪಾಲನೆ, ರೇಷ್ಮೆ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಇದ್ದರು.

# ಜನರಲ್ಲಿ ಆರ್ಥಿಕ ಪ್ರಗತಿ, ಸ್ವಾವಲಂಬಿತನ ಸ್ವಾಭಿಮಾನ ಬೆಳೆಸಲು ಬೀರೇಶ್ವರ ಬ್ಯಾಂಕ್ ಉಗಮ ; ಶಿವಪ್ಪ ಮುಳಗುಂದ



ಬೆಟಗೇರಿ, 9– ಬೆಟಗೇರಿ ಭಾಗದ ಜನರಲ್ಲಿ ಆರ್ಥಿಕ ಪ್ರಗತಿ, ಸ್ವಾವಲಂಬಿತನ, ಆರ್ಥಿಕ ಸ್ವಾಭಿಮಾನವನ್ನು ಬೆಳೆಸುವ ಪ್ರಮುಖ ಉದ್ದೇಶದಿಂದಾಗಿಯೇ ಸಂಸದರಾದ ಅಣ್ಣಾಸಾಹೇಬ ಶಂಕರ ಜೊಲ್ಲೆ ಅವರು ಶ್ರೀ ಬೀರೇಶ್ವರ ಕೋ ಆಪ್ ಕ್ರೆಡಿಟ್ ಸೊಸಾಯಟಿ ಲಿ. ಯಕ್ಸಂಬಾ ಶಾಖೆಯನ್ನು ಬೆಟಗೇರಿ ಸ್ಥಾಪಿಸಿ ಇಂದಿಗೆ ಯಶಸ್ವಿ 3 ವರ್ಷಗಳಾಗಿವೆ ಎಂದು ಬ್ಯಾಂಕಿನ ಅಧ್ಯಕ್ಷರು, ಸಂಚಾಲಕರು ಹಾಗೂ ಕೇಂದ್ರ ಮತ್ತು ರಾಜ್ಯ ಸರಕಾರದ ಯಶಸ್ವಿ ಉದ್ಯಮದಾರರು ಪ್ರಶಸ್ತಿ ಪುರಸ್ಕೃತರಾದ ಶಿವಪ್ಪ ಮುಳಗುಂದ ಹೇಳಿದರು.

ಬೆಟಗೇರಿಯ ಟೆಂಗಿನಕಾಯಿ ಬಜಾರನಲ್ಲಿರುವ ಬೀರೇಶ್ವರ ಕೋ ಆಪ್ ಕ್ರೆಡಿಟ್ ಸೊಸಾಯಟಿ ಲಿ. ಯಕ್ಸಂಬಾ ಶಾಖೆಯಲ್ಲಿ ಗುರುವಾರ ಏರ್ಪಡಿಸಿದ್ದ 3 ನೇ ವರ್ಷದ ಯಶಸ್ವಿ ಸಮಾರಂಭದಲ್ಲಿ ಅವರು ಮಾತನಾಡಿದರು. ಸಂಸದರಾದ ಅಣ್ಣಾಸಾಹೇಬ ಶಂಕರ ಜೊಲ್ಲೆ ಅವರು ಜನರಲ್ಲಿ ಸಹಕಾರ, ಆರ್ಥಿಕ ಪ್ರಗತಿ, ಆರ್ಥಿಕ ಸ್ವಾಭಿಮಾನ ಜೀವನ ಕೌಶಲ್ಯ ಬೆಳೆಸುವ ಪ್ರಮುಖ ಉದ್ದೇಶದಿಂದಾಗಿಯೇ ಬೆಳಗಾವಿ ಜಿಲ್ಲೆಯ ಯಕ್ಸಂಬ ಗ್ರಾಮದಲ್ಲಿ ತಮ್ಮಕುಲ ದೇವರಾದ ಬೀರೇಶ್ವರ ಹೆಸರಲ್ಲಿ ಶ್ರೀ ಬೀರೇಶ್ವರ ಕೋ ಆಪ್ ಕ್ರೆಡಿಟ್ ಸೊಸಾಯಟಿ ಲಿ. ಯಕ್ಸಂಬಾ ಶಾಖೆಯನ್ನು ತೆರೆದರು, ಅದು ಗ್ರಾಹಕರಿಗೆ ಉತ್ತಮ ಸೇವೆಯನ್ನು ನೀಡುವ ಮೂಲಕ ಗಳಿಸಿರುವ ವಿಶ್ವಾಸ ಮತ್ತು ಸಹಕಾರದ ಆಧಾರದ ಮೇಲೆ ಬಹು ರಾಜ್ಯಗಳಲ್ಲಿ 235 ಶಾಖೆಗಳಾಗಿ ಜನಸೇವೆಯಲ್ಲಿ ತೊಡಗಿರುವದ ಸಂತಸದ ಸಂಗತಿಯಾಗಿದೆ. ಶ್ರೀ ಬೀರೇಶ್ವರ ಸೊಸಾಯಟಿಯು ಒಟ್ಟು 4.64 ಲಕ್ಕಕ್ಕೂ ಅಧಿಕ ಸದಸ್ಯರನ್ನು ಹೊಂದಿದ್ದು, ಶೇರ ಬಂಡವಾಳ 38,22 ಕೋಟಿ ರೂ, ಠೇವಣಿ 5754,96, 96.903.00 ರೂ, ಸಾಲ ವಿತರಣೆ 4121,05.64.722.63 ರೂ, ಬ್ಯಾಂಕ್ ಬ್ಯಾಲೆನ್ಸ್ 1407, 12.39.562.21 ಹೊಂದಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಬೆಟಗೇರಿ ಭಾಗದ ಜನರಲ್ಲಿ ಆರ್ಥಿಕ ವಹಿವಾಟು ಮತ್ತು ಆರ್ಥಿಕ ಪ್ರಗತಿ ಹಾಗೂ ಸ್ವಾವಲಂಭಿ ಮತ್ತು ಸ್ವಾಭಿಮಾನದ ಬದುಕು ಬೆಳೆಸುವ ಉದ್ದೇಶದಿಂದಾಗಿ ಲಿ. ಡಾ. ತೋಂಟದ ಸಿದ್ದಲಿಂಗ ಮಹಾಸ್ವಾಮೀಜಿಗಳ ಆಶಯ ಮತ್ತು ಅವರ ಮಾರ್ಗದರ್ಶನ ಅಡಿಯಲ್ಲಿ ಬೆಟಗೇರಿ ಭಾಗದಲ್ಲಿ 235 ಶಾಖೆಯನ್ನು ತೆರೆಯಲಾಗಿದ್ದು, ಅದರ ಅಧ್ಯಕ್ಷತೆ ಮತ್ತು ಸಂಚಾಲಕ ಹೊಣೆಗಾರಿಕೆಯನ್ನು ನನ್ನ ಹೆಗಲಿಗೆ ಏರಿಸಿದ್ದಾರೆ, ಅದು ಈಗ 3 ನೇ ವರ್ಷದ ವಾರ್ಷಿಕೋತ್ಸವವನ್ನು ಸಂಭ್ರಮಿಸುತ್ತಿದ್ದು, ಈ ಅವಧಿಯಲ್ಲಿ 235 ಸದಸ್ಯರು ಸದಸ್ಯತ್ವ ಪಡೆದು ಆರ್ಥಿಕ ವಹಿವಾಟು ನಿರ್ವಹಿಸುತ್ತಿದ್ದಾರೆ. 5.54.34.294 ರೂಗಳಷ್ಟು ಠೇವಣಿ, 10,40.9052 ರೂಗಳಷ್ಟು ಸಾಲವನ್ನು ನೀಡಿಗ್ರಾಹಕರ ಸೇವೆಯನ್ನು ಮಾಡುತ್ತಿರುವದು ಸಂತಸದ ಸಂಗತಿಯಾಗಿದೆ. ಶ್ರೀ ಬೀರೇಶ್ವರ ಕೋ ಆಪ್ ಕ್ರೆಡಿಟ್ ಸೊಸಾಯಟಿ ಲಿ. ಯಕ್ಸಂಬಾ ವ್ಯಾಪ್ತಿ ಕರ್ನಾಟಕ ಅಲ್ಲದೇ ಬಹು ರಾಜ್ಯಗಳಲ್ಲೂ ವ್ಯಾಪಿಸಿದ್ದು. ಸೊಸಾಯಟಿ ಗ್ರಾಹಕರೊಂದಿಗೆ ವಿಶ್ವಾಸ, ತ್ವರಿತ ಸೇವೆ, ಸಹಕಾರ ಅಗತ್ಯ ಮಾರ್ಗದರ್ಶನ ನೀಡಿರುವ ಹಿನ್ನೆಲೆಯಲ್ಲಿ ಬಹು ರಾಜ್ಯಗಳಲ್ಲಿ ಹೆಮ್ಮರವಾಗಿ ಬೆಳೆದು ದೇಶಾದ್ಯಂತ ಪಸರಿಸುವ ಗುರಿಯನ್ನು ಇಟ್ಟುಕೊಂಡಿದೆ.. ಬೆಟಗೇರಿ ಭಾಗದ ವ್ಯಾಪಾರಸ್ಥರು ಈ ಸೊಸಾಯಟಿಯಲ್ಲಿ ಸದಸ್ಯತ್ವ ಪಡೆದು ಆರ್ಥಿಕ ವಹಿವಾಟು ನಡೆಸಿದರೇ ಆರ್ಥಿಕ ಪ್ರಬಲತೆ ಸಾದಿಸಿ, ಸಮುದಾಯದ ಮುಖ್ಯವಾಹಿನಿಗೆ ಬರುವ ಸಲಹೆಯನ್ನು ನೀಡಿದರು. ಒಬ್ಬ ವ್ಯಕ್ತಿಗೆ ಅಥವಾ ವ್ಯಾಪಾರಿಗೆ ತ್ವರಿತ ಬ್ಯಾಂಕಿಂಗ್ ಸೇವೆಗಳು ರಾಷ್ಟ್ರೀಯ ಬ್ಯಾಂಕಗಿಂತಲೂ ಇಂತಹ ಖಾಸಗಿ ಬ್ಯಾಂಕ್‌ಗಳಲ್ಲಿ ತಕ್ಷಣವೇ ಲಭ್ಯವಾಗಲಿದೆ, ಆ ಮೂಲಕ ಸೇವೆ ಪಡೆದು ಹೊಸ ಉದ್ಯಮ ಅಥವ ಹಳೆ ಉದ್ಯಮಕ್ಕೆ ಉತ್ತೇಜ ಕೊಡಲು ಸಾದ್ಯ ಇದೆ ಎಂದರು. ನಾನೂ ಕೂಡ ಬ್ಯಾಂಕ್ ಸಾಲದಿಂದಲೇ ಉದ್ಯಮ ನಿರ್ಮಿಸಿ ಬ್ಯಾಂಕ್ ಸಾಲವನ್ನು ಸಕಾಲದಲ್ಲಿ ಮರುಪಾವತಿ ಮಾಡಿ ಕೇಂದ್ರ ಮತ್ತು ರಾಜ್ಯ ಸರಕಾರದ ಯಶಸ್ವಿ ಉದ್ಯಮದಾರ ಪ್ರಶಸ್ತಿಯನ್ನು ಪಡೆಯುವ ಮೂಲಕ ಕನಾಟಕ ರಾಜ್ಯ ಮತ್ತು ಗದಗ ಜಿಲ್ಲೆಯನ್ನು ರಾಷ್ಟ್ರಮಟ್ಟದಲ್ಲಿ ಗುರುತಿಸಿರುವ ಸಂತ್ರಪ್ತಿ ನನಗಿದೆ. ಉದ್ಯಮ ಆಸಕ್ತಿಯನ್ನು ಹೊಂದಿರುವ ಉದ್ಯಮದಾರರು ಸಾಲ ಪಡೆಯುವ ಮೂಲಕ ಉದ್ಯಮ ಸ್ಥಾಪನೆಗೆ ಮುಂದಾದರೇ ಆರ್ಥಿಕ ಪ್ರಬಲ ಸಮುದಾಯ ನಿರ್ಮಿಸಲು ಸಾದ್ಯವಾಗಬಹುದು ಎಂದು ಸಲಹೆಯನ್ನು ಬೀರೇಶ್ವರ ಕೋ ಆಪ್ ಕ್ರೆಡಿಟ್ ಸೊಸಾಯಟಿ ಲಿ. ಯಕ್ಸಂಬಾ ಬೆಟಗೇರಿ ಶಾಖೆ–ಯ ಅಧ್ಯಕ್ಷರು ಹಾಗೂ ಸಂಚಾಲಕರಾದ ಶಿವಪ್ಪ ಮುಳಗುಂದ ನೀಡಿದರು.

ಈ ಸಂದರ್ಭದಲ್ಲಿ ಶ್ರೀ ಬೀರೇಶ್ವರ ಕೋ ಆಪ್ ಕ್ರೆಡಿಟ್ ಸೊಸಾಯಟಿ ಲಿ. ಯಕ್ಸಂಬಾ ಬೆಟಗೇರಿ ಶಾಖಾ ಸಲಹಾ ಸಮಿತಿಯ ಸದಸ್ಯರಾದ ಅಮರೇಶ ಚ್ಯಾಗಿ, ಬಲವಂತ ಕೃಷ್ಣಸಾ ಹಬೀಬ, ವಿಜಯ ಭೀಮಸೇನಸಾ ಕಬಾಡಿ, ರಮೇಶ ಈಶ್ವರಪ್ಪ ಗಡ್ಡಿ, ಸದಾಶಿವ ಶಂಕ್ರಪ್ಪ ಚನ್ನಪ್ಪನವರ, ಶ್ರೀಕಾಂತ ಎಮ್.ಕೆ, ವ್ಯವಸ್ಥಾಪಕರಾದ ರಾಹುಲ .ಎಸ್.ಹಲಕಾಟೆ ಸೇರಿದಂತೆ ಸಿಬ್ಬಂದಿಗಳು ಹಾಗೂ ಗ್ರಾಹಕರಿದ್ದರು.

# ನಗರದ ವಿವಿಧೆಡೆ ನೀರು ಪೂರೈಕೆ

ಗದಗ, 9– ಗದಗ ಬೆಟಗೇರಿ ಅವಳಿ ನಗರದ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ. ದಿನಾಂಕ:09–10–2026 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

ಸ್ಥಳಗಳ ವಿವರ: ವಾರ್ಡ ನಂ 01ರಲ್ಲಿ ಎಸ್.ಎಮ್. ಕೃಷ್ಣಾ ನಗರ, ಹುಬ್ಬಳ್ಳಿಮಠ ರೋಡ ಮತ್ತು 18ಮೀ ರೋಡ ವಾರ್ಡ ನಂ 11ರಲ್ಲಿ ಶಿವಬಸವ ನಗರ, ಹಾನಗಲ್ಲ ಬಾರ್ ಕೆಳಗಡೆ ಭಾಗ ಮತ್ತು ಶುದ್ಧ ನೀರಿನ ಘಟಕದವರೆಗೆ, ವಾರ್ಡ ನಂ 21 ಹಾಗೂ 23ರಲ್ಲಿ ಮೇರವಾಡೆಯವರ ಲೈನ್ ಮತ್ತು ಬೂಮಾ ಲೈನ್, ರಾಮದಾಸ ಚನ್ನಪ್ಪ ಲೈನ್, ಶಿವಪ್ಪ ಮಠಧ ಲೈನ್, ಸ್ಮಶಾನ ಕಟ್ಟೆ ಭಾಗ–1 ಮತ್ತು ಭಾಗ–2, ಮುನವಳ್ಳಿ ಪ್ಲಾಟ್, ಅಕ್ಕಿ ಪ್ಲಾಟ್, ಕಮತರ ಪ್ಲಾಟ್ ಮತ್ತು ಕರಿಬಿಷ್ಠಿ ಲೈನ್ ವಾರ್ಡ ನಂ 19,24 ಹಾಗೂ 25ರಲ್ಲಿ ಮದ್ದಿ ಓಣಿ ಹೊಸ ಲೈನ್, ವೀರನಾರಾಯಣ ಗುಡಿ ಲೈನ್, ಕೋನೇರಿ ಹೊಂಡ ಹಳೇ ಲೈನ್, ಬಾವಿ ಮೆಂಬರ್ ಲೈನ್, ವಾರ್ಡ ನಂ 22ರಲ್ಲಿ ಗಂಗಿಮಡಿ ಲೈನ್ 01 ರಿಂದ 05 ರವರೆಗೆ ವಾರ್ಡ ನಂ 34ರಲ್ಲಿ ನಂದೀಶ್ವರ ನಗರ, 20ನಂಬರ ಸ್ಕೂಲ್, ಕಳಸಾಪೂರ ರೋಡ ವಾರ್ಡ ನಂ 06ರಲ್ಲಿ ಭಜಂತ್ರಿ ಓಣಿ, ಅಂಬೇಡ್ಕರ ನಗರ, ಹೂಲಿಯವರ ಲೈನ್, ಜಮಲಮ್ಮನ ಗುಡಿ ಲೈನ್, ಹಾದಿಮನಿ ಲೈನ್

ತಾಂತ್ರಿಕವಾಗಿ ನೀರು ಪೂರೈಕೆಯಲ್ಲಿ ಒಂದು ವೇಳೆ ಅಡತಡೆಯಾದಲ್ಲಿ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಲು ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹಿರೇಹಾಳ ಗ್ರಾಮದಲ್ಲಿ ಲಸಿಕಾ ಅಧಿವೇಶನ ಕಾರ್ಯಕ್ರಮ



ರೋಣ, 9– ಮಕ್ಕಳ ಜೀವಕ್ಕೆ ಮಾರಕವಾಗುವ 12 ರೋಗಗಳು ಲಸಿಕೆ ಕೊಡಿಸದೇ ಇದ್ದಲ್ಲಿ ಮಕ್ಕಳ ಜೀವಕ್ಕೆ ಯಾವ ಸಮಯದಲ್ಲಾದರೂ ಮಾರಕವಾಗಿ ಪರಿಣಮಿಸಬಹುದು ಎಂದು ತಾಲೂಕ ಆರೋಗ್ಯ ಶಿಕ್ಷಣಾಧಿಕಾರಿ ಕೆ ಎ ಹಾದಿಮನಿ ಹೇಳಿದರು

ಅವರು ರೋಣ ತಾಲೂಕಿನ ಹಿರೇಹಾಳ ಪ್ರಾಥಮಿಕ ಆರೋಗ್ಯ ಕೇಂದ್ರ ವತಿಯಿಂದ ಗ್ರಾಮದ ಪಂಚಾಯತ ಆವರಣದಲ್ಲಿ ಜರುಗಿದ ಲಸಿಕಾ ಅಧಿವೇಶನದ ಮುಖ್ಯ ಅತಿಥಿಗಳಾಗಿ ಮಾತನಾಡಿ, ಜೀರೋದಿಂದ ಎರಡು ವರ್ಷದ ಒಳಗಿನ ಮಕ್ಕಳಿಗೆ ಪೋಲಿಯೋ ಬಾಲಕ್ಷಯ ರೋಟ ಹೆಪಟೈಟಿಸ್ ಬಿ ಗಂಟಲು ಮಾರಿ ನಾಯಿ ಕೆಮ್ಮು ಧನುರ್ವಾಯು ಹಿಮೋಫಿಲಸ್

ಇನ್ಪ್ಲುಯಂಜಾ ಬಿ ನಿಮೊಕೊಕಲ್ ಕಾಂಜೂ ಗೇಟಿವ್ ವೈರಸ್ ಇನ್ಫ್ಲುಎನ್ಜಾ ದಡರಾ ರುಬೆಲ್ಲಾ ಮೆದುಳು ಜ್ವರ ಇಂತಹ 12 ಮಾರುಕ ರೋಗಗಳು ಮಕ್ಕಳಿಗೆ ಮಾರಕವಾಗಿ ಪರಿಣಮಿಸಲಿದ್ದು ಕೊಲ್ಲುವ ರೋಗಗಳಿಗಿಂತ ಮಕ್ಕಳ ಜೀವ ಕಾಯುವ ಲಸಿಕೆ ಮಹತ್ತರವಾದದ್ದು ಆದ್ದರಿಂದ ಲಸಿಕೆ ಹಾಕಿಸಿ ಜಾಣರಾಗಿರಿ ಎಂದು ಪಾಲಕರಿಗೆ ಅವರು ಹೇಳಿದರು

ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿಗಳಾದ ಶಾಂತಾದೇವಿ ದೇಸಾಯಿ ಮಾತನಾಡಿ, ಒಂದು ಮಗುವಿನಿಂದ ಮತ್ತೊಂದು ಮಗುವಿಗೆ ಕನಿಷ್ಠ ಪಕ್ಷ ತಾಯಿ ಮೂರು ವರ್ಷಗಳ ಅಂತರವನ್ನು ಕಾಯ್ದುಕೊಳ್ಳಬೇಕು ಆರೋಗ್ಯ ಇಲಾಖೆಯಲ್ಲಿ ವಿಫಲವಾಗಿ ಲಭ್ಯವಿರುವ ತಾತ್ಕಾಲಿಕ ಕುಟುಂಬ ಕಲ್ಯಾಣ ಯೋಜನಾ ವಿಧಾನಗಳನ್ನು ಅಳವಡಿಸಿಕೊಂಡು ಮಗುವಿನಿಂದ ಮಗುವಿಗೆ ಕನಿಷ್ಠ ಮೂರು ವರ್ಷ ಅಂತರ ಕಾಪಾಡಿಕೊಂಡಲ್ಲಿ ತಾಯಿ ಮತ್ತು ಮಗುವಿನ ಆರೋಗ್ಯ ಚೆನ್ನಾಗಿರುವುದರಲ್ಲಿ ಯಾವುದೇ ಸಂದೇಹವಿಲ್ಲ ಎಂದು ಅವರು ಹೇಳಿದರು. ಕಾರ್ಯಕ್ರಮದಲ್ಲಿ ಆಶಾ ಕಾರ್ಯಕರ್ತೆಯರು ಮತ್ತು ಇತರರು ಪಾಲ್ಗೊಂಡಿದ್ದರು

# ಜಿಲ್ಲಾ ವಿಪತ್ತು ನಿರ್ವಹಣಾ ಪ್ರಗತಿ ಪರಿಶೀಲನಾ ಸಭೆ

## ಕುಡಿಯುವ ನೀರು ಹಾಗೂ ಮೇವಿನ ಕೊರತೆಯಾಗದಂತೆ ಕ್ರಮ ವಹಿಸಬೇಕು– ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ



ಗದಗ, 9– ಜಿಲ್ಲೆಯಲ್ಲಿ ಜನ ಜಾನುವಾರುಗಳಿಗೆ ಕುಡಿಯುವ ನೀರಿನ ಕೊರತೆಯಾಗದಂತೆ ಕ್ರಮವಹಿಸಿ ಬರ ಪರಿಸ್ಥಿತಿಯನ್ನು ಸಮರ್ಥವಾಗಿ ವಿವಿಧ ಅಧಿಕಾರಿಗಳ ಸಮನ್ವಯದೊಂದಿಗೆ ಎದುರಿಸಬೇಕು ಎಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ತಿಳಿಸಿದರು.

ಅವರು ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ ಅಕ್ಟೋಬರ್ (8) ರಂದು ಜರುಗಿದ ಹಿಂಗಾರು ಹಂಗಾಮಿನಲ್ಲಿ ಗ್ರಾಮೀಣ / ನಗರ ಪ್ರದೇಶದಲ್ಲಿ ಜನ ಜಾನುವಾರುಗಳಿಗೆ ಕುಡಿಯುವ ನೀರು ಮತ್ತು ಮೇವಿನ ಲಭ್ಯತೆಯ ಕುರಿತು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ತಾಲೂಕಾವಾರು ನೀರಿನ ಸಮಸ್ಯೆ ಇರುವ ಗ್ರಾಮಗಳ ಪಟ್ಟಿ ತಯಾರಿಸಿ ಸಲ್ಲಿಸಬೇಕು. ಜಾನುವಾರುಗಳಿಗೆ ಮೇವಿನ ಕೊರತೆಯಾಗದಂತೆ ಕ್ರಮವಹಿಸಬೇಕು. ಜಲಾಶಯಗಳಿಂದ ನೀರು ಬಿಡುವ ಮುನ್ನ ಜಿಲ್ಲಾಧಿಕಾರಿಗಳ ಗಮನಕ್ಕೆ ತರಬೇಕೆಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಅಭಾವ ಉಂಟಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು. ಜನ ಮತ್ತು ಜಾನುವಾರುಗಳಿಗೆ ಸಾಕಷ್ಟು ಕುಡಿಯುವ ನೀರು ಹಾಗೂ ಅಗತ್ಯ ಮೇವಿನ ಪೂ–ರೈಕೆಗೆ ಕ್ರಮ ಕೈಗೊಳ್ಳಬೇಕು. ಜಲ ಜೀವನ್ ಮಿಷನ್ (ಎಎಂ) ಯೋಜನೆಯಡಿ ಕೈಗೆತ್ತಿಕೊಳ್ಳಲಾದ ಜೆಜೆಎಮ್ ಕಾಮಗಾರಿಗಳನ್ನು ತ್ವರಿತವಾಗಿ ಹಾಗೂ ಗುಣಮಟ್ಟದಿಂದ ಪೂರ್ಣಗೊಳಿಸಿ ಪ್ರತಿಯೊಂದು ಮನೆಗೆ ನಲ್ಲಿ ನೀರು ತಲುಪಿಸಬೇಕು ಎಂದರು.

ಗ್ರಾಮೀಣ ಪ್ರದೇಶಗಳಲ್ಲಿ ವಸತಿ ರಹಿತರಿಗೆ ನಿವೇಷನ ನೀಡಲು ಭೂಮಿ ಲಭ್ಯತೆ ಕುರಿತು ತಹಸೀಲ್ದಾರ್ ಹಾಗೂ ಇಓಗಳು ನೀಡಿದ ವರದಿಗಳನ್ನು ಪರಿಶೀಲಿಸಿ, ಸೂಕ್ತ ಭೂ ಸುಧಾರಣೆ ಹಾಗೂ ಲೆವೆಲಿಂಗ್ ಮಾಡಿ ನಿವೇಷನ ಜಾಗ ಒದಗಿಸಲು ಅಧಿಕಾರಿಗಳಿಗೆ ನಿರ್ದೇಶಿಸಿದರು.

ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಕೆರೆಗಳಲ್ಲಿ ಪ್ರಸ್ತುತ ಸಂಗ್ರಹವಾಗಿರುವ ನೀರಿನ ಪ್ರಮಾಣ ಹಾಗೂ ಜಿಲ್ಲೆಯ ಅಂತರ್ಜಲ ಮಟ್ಟದ ವರದಿಯನ್ನು ಪರಿಶೀಲಿಸಿದ ಜಿಲ್ಲಾಧಿಕಾರಿಗಳು, ನೀರನ್ನು ಸಮರ್ಪಕವಾಗಿ ಬಳಕೆ ಮಾಡಲು ಸೂಚಿಸಿದರು. ಅಲ್ಲದೆ ಕೆರೆಗಳ ನೀರಿನ ಗುಣಮಟ್ಟವನ್ನು ನಿಯಮಿತವಾಗಿ ತಪಾಸಣೆ ಮಾಡಲು ನಿರ್ದೇಶಿಸಿದರು. ತೋಟಗಾರಿಕೆ ಇಲಾಖೆ ಕಾರ್ಯಕ್ರಮಗಳು ಹಾಗೂ ವಿಬಿಜಿ ರಾಮ್ ಜಿ ಯೋಜನೆಯ ಪ್ರಗತಿ ವಿವರಗಳನ್ನು ಪರಿಶೀಲಿಸಿ, ನಿಗದಿತ ಅವಧಿಯಲ್ಲಿ ಗುರಿ ತಲುಪಲು ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಸಿ. ಎನ್. ಶ್ರೀಧರ ಸೂಚಿಸಿದರು.

ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಸಿ. ಆರ್. ಮುಂಡರಗಿ ಮಾತನಾಡಿ ತಾಲೂಕುವಾರು ಗ್ರಾಮೀಣ ಉದ್ಯೋಗ ಖಾತ್ರಿ ಹಾಗೂ ವಿಬಿಜಿ ರಾಮ್‌ಜಿ ಕಾಮಗಾರಿಗಳ ಪ್ರಗತಿಯನ್ನು ವಿವರಿಸಿ, ಜಲಮೂಲಗಳ ಪುನಶ್ಚೇತನ ಹಾಗೂ ಕೆರೆ ಹೂಳೆತ್ತುವ ಕಾರ್ಯಗಳು ಪ್ರಗತಿಯಲ್ಲಿವೆ ಎಂದು ಮಾಹಿತಿ ನೀಡಿ–ದರು.

ವಸತಿ ನಿವೇಶನ ಭೂ ಗುರುತಿಸುವಿಕೆ: ತಾಲೂಕು ಮಟ್ಟದಲ್ಲಿ ತಹಸೀಲ್ದಾರ್ ಹಾಗೂ ಇಓಗಳ ಸಮನ್ವಯದೊಂದಿಗೆ ಅರ್ಹ ಫಲಾನುಭವಿಗಳಿಗೆ ನಿವೇಶನ ಒದಗಿಸಲು ಭೂಮಿ ಗುರುತಿಸುವ ಹಾಗೂ ಸರ್ವೆ ಮಾಡುವ ಪ್ರಕ್ರಿಯೆ ಚುರುಕಿನಿಂದ ನಡೆಯುತ್ತಿದೆ ಎಂದು ಸಭೆಯಲ್ಲಿ ವಿವರಿಸಿದರು.

ಜಂಟಿ ಕೃಷಿ ನಿರ್ದೇಶಕಿ ಶ್ರೀಮತಿ ಚೇತನಾ ಪಾಟೀಲ್ ಮಾತನಾಡಿ ಜಿಲ್ಲೆಯಲ್ಲಿ ಜೋಳದ ಕೊಯ್ಲು ಕಾರ್ಯಗಳು ಪೂರ್ಣಗೊಳ್ಳುವ ಹಂತದಲ್ಲಿದ್ದು, ರೈತರಿಗೆ ಸೂಕ್ತ ಮಾಹಿತಿ ಹಾಗೂ ಬೆಂಬಲ ನೀಡಲಾಗುತ್ತಿದೆ. ಸೆಪ್ಟೆಂಬರ್ ತಿಂಗಳಿನಲ್ಲಿ ವಾಡಿಕೆಗಿಂತ ಮಳೆ ಕಡಿಮೆಯಾಗಿದ್ದರೂ, ಅಕ್ಟೋಬರ್‌ನಲ್ಲಿ ಮಳೆಯ ಪ್ರಮಾಣ ಚೇತರಿಸಿಕೊಂಡು ಶೇಕಡಾ 90 ರಷ್ಟು ಪ್ರಗತಿ ಕಂಡಿದೆ ಎಂದರು.

ಜಂಟಿ ಬೆಳೆ ಸಮೀಕ್ಷೆ ಕಾರ್ಯದಲ್ಲಿ ಶೇಕಡಾ 99 ರಷ್ಟು ಸಾಧನೆಯಾಗಿದ್ದು, ಮಿಸ್‌ಮ್ಯಾಚ್ ಪ್ರಕರಣಗಳು ಹಾಗೂ ಬೆಳೆ ಹಾನಿ ಸಮೀಕ್ಷೆಯನ್ನು ನಿಗದಿತ ದಿನಾಂಕದೊಳಗೆ ಪೂರ್ಣಗೊಳಿಸಿ ಅರ್ಹ ರೈತರಿಗೆ ಪರಿಹಾರ ದೊರಕಿಸಲು ಕ್ರಮವಹಿಸಲಾಗುತ್ತಿದೆ. 'ಪಿಎಂ ಕಿಸಾನ್' ಯೋಜನೆಯಡಿ ಉಳಿದಿರುವ ಅರ್ಹ ರೈತರು ತಕ್ಷಣವೇ ಇ–ಕೆವೈಸಿ ಪೂರ್ಣಗೊಳಿಸುವಂತೆ ಮನವಿ ಮಾಡಿದರು.

ಈ ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಡಾ. ದುರಗೇಶ್ ಕೆ. ಆರ್, ಉಪ ವಿಭಾಗಾಧಿಕಾರಿ ಗಂಗಪ್ಪ ಎಮ್, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಬಸನಗೌಡ ಕೊಟೂರು, ಎಲ್ಲಾ ತಾಲೂಕಿನ ತಹಸೀಲ್ದಾರರು, ಕಾರ್ಯನಿರ್ವಾಹಣಾ ಅಧಿಕಾರಿಗಳು, ಸ್ಥಳೀಯ ಸಂಸ್ಥೆಗಳ ಮುಖ್ಯ ಅಧಿಕಾರಿಗಳು ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

# ಆದಿಶಕ್ತಿ ದುರ್ಗಾದೇವಿಯ ಮೂರ್ತಿ ಪ್ರತಿಷ್ಠಾಪನೆ



ಗದಗ, 9– ಗದಗ ನಗರದ ಜವುಳಗಲ್ಲಿಯಲ್ಲಿರುವ ಶ್ರೀ ಸಮಗಾರ ಹರಳಯ್ಯ ಸಮಾಜದ ಶ್ರೀ ದುರ್ಗಾದೇವಿಯ ದೇವಸ್ಥಾನದಲ್ಲಿ ನೂತನವಾಗಿ ನಿರ್ಮಿಸಿದ ಆದಿಶಕ್ತಿ ದುರ್ಗಾದೇವಿಯ ಮೂರ್ತಿಯನ್ನು ದಿನಾಂಕ 09–10–2026ನೇ ಶುಕ್ರವಾರ ಬೆಳಿಗ್ಗೆ 8–00 ಗಂಟೆಗೆ ಪ್ರತಿಷ್ಠಾಪನೆ ಮಾಡಲಾಗುವುದು.

ದಿನಾಂಕ: 19–10–2026ನೇ ಸೋಮವಾರ ಮಧ್ಯಾಹ್ನ 1–00 ಘಂಟೆ–ಗೆ ಖಂಡೆ ಪೂಜೆಯ ನಿಮಿತ್ಯ ಮಹಾ ಅನ್ನಸಂತರ್ಪಣೆ ಜರಗುವುದು. ಕಾರಣ ಸರ್ವರೂ ಶ್ರೀದೇವಿಯ ಕೃಪೆಗೆ ಪಾತ್ರರಾಗಿ, ಮಹಾಪ್ರಸಾದ ಸ್ವೀಕರಿಸಿ ತನು, ಮನ, ಧನ ಸಹಾಯ, ಸಹಕಾರ ನೀಡಬೇಕಾಗಿ ವಿನಂತಿ.

ದಿನಾಂಕ : 20–10–2026ನೇ ಮಂಗಳವಾರ ದಿವಸ ದಸರಾ ಪಲ್ಲಕ್ಕಿ ಉತ್ಸವ ಕಾರ್ಯಕ್ರಮವು ಜರುಗುವುದು. ಮಧ್ಯಾಹ್ನ 4–00 ಘಂಟೆಗೆ ಯಲ್ಲಮ್ಮದೇವಿ ದೇವಸ್ಥಾನ ಜವುಳಗಲ್ಲಿಯಿಂದ ಮೆರವಣಿಗೆಯು ಜರಗುವದು. ಸಂಜೆ ಬನ್ನಿ ಮುಡಿಯುವ ಕಾರ್ಯಕ್ರಮ ಜರುಗುವುದು.

ವಿಜಯದಶಮಿ ಬನ್ನಿ ಮುಡಿಯುವ ಕಾರ್ಯಕ್ರಮ ಹಾಗೂ ಪಲ್ಲಕ್ಕಿ ಮೆರವಣಿಗೆಯಲ್ಲಿ ಸಮಾಜ–ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಕಾರ್ಯಕ್ರಮಕ್ಕೆ ಶೋಭೆ ತರಬೇಕೆಂದು ಸಮಗಾರ ಹರಳಯ್ಯ ಯುವಕ ಸಂಘ ಅಧ್ಯಕ್ಷರು ವಿನಂತಿಸಿದ್ದಾರೆ.

# ಪಂಚಾಯಿತಿ ಸಿನಿಮಾದಲ್ಲಿ ಯೂಟ್ಯೂಬರ್‌ಗಳಿಗೂ ಅವಕಾಶ



ಬೆಂಗಳೂರು, 9– ಯೂಟ್ಯೂಬ್‌ನಲ್ಲಿ ತಮ್ಮದೇ ಆದ ಸಹಸ್ರಾರು ಪ್ರೇಕ್ಷಕ ಬಳಗವನ್ನು ಹೊಂದಿರುವ ಪ್ರತಿಭಾವಂತ ಕಲಾವಿದರಿಗೆ ಸಿನಿಮಾದಲ್ಲಿ ಅವಕಾಶ ನೀಡುವ ಮೂಲಕ ಹಿರಿಯ ನಿರ್ದೇಶಕ ಪಿ. ಶೇಷಾದ್ರಿ ಅವರು ತಮ್ಮ ಹೊಸ ಹದಿನಾಲ್ಕನೇ ಸಿನಿಮಾ ನೇಟಿವ್ ಕ್ರಿಯೆಶನ್ಸ್ ಅಡಿಯಲ್ಲಿ ತಯ್ಯಾರಾಗುತ್ತಿರುವ 'ಪಂಚಾಯಿತಿ'ಯಲ್ಲಿ ಹೊಸ ಪ್ರಯೋಗಕ್ಕೆ ಮುಂದಾಗಿದ್ದಾರೆ.

ಯೂಟ್ಯೂಬ್‌ನಲ್ಲಿ ಜನಪ್ರಿಯರಾದ ಕಲಾವಿದ ಗೋಕುಲ್ ರಾಜ್, ಜಗದೀಶ್ ಮೂಕಿ, ಪ್ರಕಾಶ ರಾಜಕುಮಾರ್, ಶ್ರುತಿ ಹೇಮಂತ್, ಬಿಂದು, ವೀರಣ್ಣ ಹೊಸಮನಿ ಮೊದಲಾದ ಕಲಾವಿದರಿಗೆ 'ಪಂಚಾಯಿತಿ' ಚಿತ್ರದಲ್ಲಿ ಪ್ರಮುಖ ಪಾತ್ರಗಳನ್ನು ನೀಡಿದ್ದಾರೆ. ಚಿತ್ರದ ಮತ್ತೊಂದು ವಿಶೇಷವೆಂದರೆ, ಸಿನಿಮಾದ ಎಲ್ಲ ಪಾತ್ರಗಳಿಗೂ ಉತ್ತರ ಕರ್ನಾಟಕದ ಕಲಾವಿದರನ್ನೇ ಬಳಸಿಕೊಂಡಿರುವುದು. "ಉತ್ತರ ಕರ್ನಾಟಕದ ಭಾಷೆ ಮತ್ತು ಇಲ್ಲಿನ ಸೊಗಡು ನನಗೆ ಬಹಳ ಇಷ್ಟ. ಹನ್ನೆರಡು ವರ್ಷಗಳ ಹಿಂದೆ 'ಡಿಸೆಂಬರ್–1' ಚಿತ್ರವನ್ನು ಇಲ್ಲಿಯ ಪ್ರಾದೇಶಿಕತೆ ಅಳವಡಿಸಿ ಮಾಡಿದ್ದೆ ಆ ಚಿತ್ರ ಎರಡು ರಾಷ್ಟ್ರಪ್ರಶಸ್ತಿಗಳನ್ನು ಪಡೆದಿತ್ತು, ಇಲ್ಲಿನ ಜನರ ಆತ್ಮೀಯತೆ ನನ್ನನ್ನು ಇಲ್ಲಿಗೆ ಮತ್ತೆ ಕರೆತಂದಿದೆ ಎಂದು ಪಿ. ಶೇಷಾದ್ರಿ ಹೇಳಿದ್ದಾರೆ.

ಚಿತ್ರದ ಮತ್ತೊಂದು ವಿಶೇಷವೆಂದರೆ ಪ್ರಮುಖ ಪಾತ್ರವೊಂದರಲ್ಲಿ ನಿಜ ಜೀವನದ ಜೋಗತಿ 'ದೀಪಾ ಜೋಗತಿ' ಅಭಿನಯಿಸಿರುವುದು. ಮೂಲತಃ ರಾಯಚೂರಿನವರಾದ 'ದೀಪಾ ಜೋಗತಿ' ಸಮಾಜದ ಅಂಚಿನಲ್ಲಿ ಬದುಕುತ್ತಿರುವ ಜೋಗತಿ ಸಮುದಾಯದ ಪ್ರತಿನಿಧಿಯಾಗಿ ಚಿತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಜೊತೆಗೆ ಚಿತ್ರಕ್ಕಾಗಿ ಜನಪದ ಸೊಗಡಿನ ಹಾಡು ಕೂಡ ಹಾಡಿದ್ದಾರೆ. ಹುಬ್ಬಳ್ಳಿ, ಧಾರವಾಡ, ಶಿವಳ್ಳಿ, ಕುಂದಗೋಳ, ಹೆಬ್ಬಳ್ಳಿ, ಬೂದನಗುಡ್ಡ ಸೇರಿದಂತೆ ಉತ್ತರ ಕರ್ನಾಟಕದ ವಿವಿಧ ಸುಂದರ ತಾಣಗಳಲ್ಲಿ ಒಂದೇ ಹಂತದಲ್ಲಿ ಚಿತ್ರೀಕರಣ ಮುಗಿಸಲಾಗಿದೆ. ಸದ್ಯ ಚಿತ್ರದ ಸಂಕಲನ ಕಾರ್ಯ ಪೂರ್ಣಗೊಂಡಿ–ದ್ದು, ಸಂಗೀತದ ಜೋಡಣೆ ಹಾಗೂ ಶಬ್ದವಿನ್ಯಾಸದ ಜೊತೆಗೆ ಉಳಿದ ಪೋಸ್ಟ್ ಪ್ರೊಡಕ್ಷನ್ ಕಾರ್ಯಗಳನ್ನು ಚಿತ್ರ ತಂಡ ನಡೆಸಿದೆ. ಶ್ರುತಿ ಬಿಸರಹಳ್ಳಿ, ಬಸವರಾಜ್ ತಿರ್ಲಾಪುರ ಮೊದಲಾದವರೂ ಅಭಿನಯಿಸಿರುವ ಚಿತ್ರವನ್ನು ರಾಷ್ಟ್ರಪ್ರಶಸ್ತಿ ವಿಜೇತ ಹಿರಿಯ ನಿರ್ದೇಶಕ ಪಿ.ಶೇಷಾದ್ರಿ ಚಿತ್ರಕತೆ ಬರೆದು ನಿರ್ದೇಶನ ಮಾಡಿದ್ದು, ಕಥೆ ಅರವಿಂದ ಮಿತ್ರ, ಛಾಯಾಗ್ರಹಣ ಗುರುಪ್ರಸಾದ್ ಕಾಶಿ. ಶಿವಾ ಸಂಗೀತ, ಬಿ.ಎಸ್. ಕೆಂಪರಾಜ್ ಸಂಕಲನ, ಪಿ ಆರ್ ಓ. ಡಾ. ಪ್ರಭು ಗಂಜಿಹಾಳ, ಡಾ. ವೀರೇಶ್ ಹಂಡಿಗಿ, ಸಹ ನಿರ್ದೇಶನ ಟಿ.ಆರ್.ಪ್ರಭು, ವಿದ್ಯಾಶ್ರೀ, ಪ್ರಕಾಶ್‌ರಾಜಕುಮಾರ್ ಕಾರ್ಯನಿರ್ವಹಿಸಿದ್ದಾರೆ. ರವಿಶಂಕರ್ ನಿರ್ಮಾಣ ನಿರ್ವಹಣೆ ಜವಾಬ್ದಾರಿ ಚಿತ್ರಕ್ಕಿದೆ. ದೊಡ್ಡ ನಾಗಯ್ಯ ನಿರ್ಮಾಪಕರಾಗಿದ್ದಾರೆ.

# ಜೀವನ ದರ್ಶನ ಉಪನ್ಯಾಸ ಮಾಲಿಕೆ ಕಾಶೀ ವಿಶ್ವನಾಥನ ಪಾಲಕಿ ಸೇವೆ

ಗದಗ, 9– ಗದುಗಿನ ವಿವೇಕಾನಂದ ನಗರದ ಕಾಶೀ ವಿಶ್ವನಾಥ ದೇವಸ್ಥಾನದ ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಭವನದಲ್ಲಿ ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಸಮಿತಿಯಿಂದ ಜೀವನ ದರ್ಶನ 63ನೇ ಮಾಲಿಕೆ, ಕಾಶೀ ವಿಶ್ವನಾಥನ ಪಾಲಕಿ ಸೇವೆ ಕಾರ್ಯಕ್ರಮ ಅ. 10 ರಂದು ಶನಿವಾರ ಸಂಜೆ 6–30 ಗಂಟೆಗೆ ಜರುಗಲಿದೆ.

ಸಾನಿಧ್ಯವನ್ನು ಶಿರೋಳ–ಭೈರನಹಟ್ಟಿಯ ತೋಂಟದಾರ್ಯ ಮಠ ಹಾಗೂ ದೊರೆಸ್ವಾಮಿ ವಿರಕ್ತಮಠದ ಪೂಜ್ಯ ಶಾಂತಲಿಂಗ ಮಹಾಸ್ವಾಮಿಗಳು ವಹಿಸುವರು. ಗದಗ ಕ್ಷೇತ್ರಶಿಕ್ಷಣಾಧಿಕಾರಿಗಳ ಕಾರ್ಯಾಲಯದ ಸಂಪನ್ಮೂಲ ವ್ಯಕ್ತಿ ಶ್ರೀಮತಿ ಶ್ರೀಮತಿ ಕವಿತಾ ಬಸವರಾಜ ದಂಡಿನ 'ಮಹಿಳೆಯರು ಮತ್ತು ಹಬ್ಬ ಹರಿದಿನಗಳು' ವಿಷಯವಾಗಿ ಉಪನ್ಯಾಸ ನೀಡುವರು.

ಅಧ್ಯಕ್ಷತೆಯನ್ನು ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಸಮಿತಿಯ ಅಧ್ಯಕ್ಷ ಎ.ಟಿ.ನರೇಗಲ್ ವಹಿಸುವರು. ಸಮಿತಿಯ ಉಪಾಧ್ಯಕ್ಷ ಆರ್.ಆರ್. ಕಾಶಪ್ಪನವರ ಉಪಸ್ಥಿತರಿರುವರು. ಸಹಕಾರ ಸೇವಾ ರತ್ನ ಪುರಸ್ಕೃತರಾದ ಸಿ.ಕೆ.ಮಾಳಶೆಟ್ಟಿ ಹಾಗೂ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃರಾದ ರಮೇಶ ಚಲವಾದಿ ಅವರಿಗೆ ಗೌರವ ಸನ್ಮಾನ ಜರುಗಲಿದೆ.

ಪ್ರಸಾದ ಸೇವೆಯನ್ನು ಗದಗ–ಬೆಟಗೇರಿ ನಗರಸಭೆಯ ನಿವೃತ್ತ ಪೌರಾಯುಕ್ತ ಜಗದೀಶಚ್ಚಂದ್ರ ನಾಡಗೌಡರ, ನಿವೃತ್ತ ಶಿಕ್ಷಕ ದೇವೇಂದ್ರಪ್ಪ ಅಂಗಡಿ, ನಿವೃತ್ತ ನೌಕರ ಜಿ.ವ್ಹಿ.ಇಟಗಿ ಅವರು ವಹಿಸಿಕೊಂಡಿದ್ದಾರೆ. ಸರ್ವರಿಗೂ ಸ್ವಾಗತವಿದೆ ಎಂದು ಸಮಿತಿಯ ಕಾರ್ಯದರ್ಶಿ ಕೆ.ಪಿ.ಗುಳಗೌಡ್ರ ತಿಳಿಸಿದ್ದಾರೆ.

### ಈಶಾನ್ಯ ಶಿಕ್ಷಕರ ಕ್ಷೇತ್ರ ಚುನಾವಣೆ

# ಹೊಸಪೇಟೆಯಲ್ಲಿ ಬಿಜೆಪಿ ಅಭ್ಯರ್ಥಿ ಶಶೀಲ್ ನಮೋಶಿ ಮತಯಾಚನೆ

ಹೊಸಪೇಟೆ, 09– ಈಶಾನ್ಯ ಶಿಕ್ಷಕರ ಮತಕ್ಷೇತ್ರದ ಚುನಾವಣೆ ಅಂಗವಾಗಿ ಬಿಜೆಪಿ ಅಭ್ಯರ್ಥಿ ಶಶೀಲ್ ಜಿ. ನಮೋಶಿ ಅವರು ಶುಕ್ರವಾರ ವಿಜಯನಗರ ಜಿಲ್ಲೆ ಹೊಸಪೇಟೆ ನಗರದ ವಿವಿಧ ಕಾಲೇಜುಗಳಿಗೆ ಭೇಟಿ ನೀಡಿ ಉಪನ್ಯಾಸಕರಲ್ಲಿ ಮತಯಾಚಿಸಿದರು.



ನಗರದ ವಿಜಯನಗರ ಮಹಾವಿದ್ಯಾಲಯ, ಮುನ್ಸಿಪಲ್ ಕಾಲೇಜು, ಪಿ.ಡಿ.ಐ.ಟಿ. ಕಾಲೇಜು, ತೆಗ್ಗಿನಮಠದ ಐಟಿಐ ಮತ್ತು ಡಿ.ಇಡಿ ನ್ಯಾಷನಲ್ ಕಾಲೇಜು ಹಾಗೂ ಕಾಲೇಜುಗಳಿಗೆ ಭೇಟಿ ನೀಡಿ ಮತಯಾಚಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ರಾಜ್ಯ ಉಪಾಧ್ಯಕ್ಷ ಅಯ್ಯಳ್ಳಿ ತಿಮ್ಮಪ್ಪ, ಅಶೋಕ್ ಜೀರೆ, ಸಂದೀಪ್ ಸಿಂಗ್, ಮಂಡಲ ಅಧ್ಯಕ್ಷ ಶಂಕರ್ ಮೇಟಿ,

ಮಧುಚನ್ನ ಶಾಸ್ತ್ರಿ ಹಿರೇಮಠ್, ಎಚ್. ನಟ–ರಾಜ್, ಹಾಗೂ ಎಲ್ಲಾ ಕಾಲೇಜುಗಳ ಉಪನ್ಯಾಸಕರು ಉಪಸ್ಥಿತರಿದ್ದರು.

# ಅ 13,14,15 ಜೆಎಸ್ಎಸ್ ಕಾಲೇಜಿನಲ್ಲಿ ಪೌರತ್ವ ತರಬೇತಿ ಶಿಬಿರ

ವರದಿ :ಡಿ.ಪರಶುರಾಮಪ್ಪ

ಹೂವಿನಹಡಗಲಿ:, 9– ಪಟ್ಟಣದ ಜೆಎಸ್ಎಸ್ ಶಿಕ್ಷಣ ಮಹಾವಿದ್ಯಾಲಯದಲ್ಲಿ ಅಕ್ಟೋಬರ್ 13,14&15 ರಂದು ಪೌರತ್ವ ತರಬೇತಿ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ಪ್ರಾಚಾರ್ಯ ಡಾ ಎಚ್ ಪಿ ರಮೇಶ್ ತಿಳಿಸಿದ್ದಾರೆ.



2026 ರ ಶೈಕ್ಷಣಿಕ ಸಾಲಿನ ಜೆ ಎಸ್ ಎಸ್ ಶಿಕ್ಷಣ ಮಹಾವಿದ್ಯಾಲಯದ ಪ್ರಶಿಕ್ಷಣ ವಿದ್ಯಾರ್ಥಿಗಳಿಗೆ ಪೌರತ್ವ ತರಬೇತಿ ಶಿಬಿರ ಮೂರು ದಿನಗಳ ಕಾಲ ಆಯೋಜಿಸಲಾಗಿದೆ.

ಅ 13 ರಂದು ನಿವೃತ್ತ ಪ್ರಾಂಶುಪಾಲ ಪ್ರೊ ಬಿ ಶಾಂತಮೂರ್ತಿ ಕುಲಕರ್ಣಿ ಪೌರತ್ವ ತರಬೇತಿ ಶಿಬಿರಕ್ಕೆ ಚಾಲನೆ ನೀಡುವರು.

ಮಹಾವಿದ್ಯಾಲಯದ ಪ್ರಾಚಾರ್ಯ ಡಾ ಎಚ್ ಪಿ ರಮೇಶ್ ಅಧ್ಯಕ್ಷತೆ ವಹಿಸುವರು.ಮಧ್ಯಾಹ್ನ 2 ಗಂಟೆಗೆ ನಿವೃತ್ತ ಪ್ರಾಧ್ಯಾಪಕ ಪ್ರೊ ರೇವಣಸಿದ್ದಪ್ಪ "ಯುವಜನತೆ ಹಾಗೂ ಸವಾಲುಗಳು" ಕುರಿತು ಉಪನ್ಯಾಸ ನೀಡುವರು.

ಅ 14 ಬೆಳಿಗ್ಗೆ 10 ಗಂಟೆಗೆ ಮಲ್ಲಿಗೆ ಮೆಲೊಡೀಸ್ ವತಿಯಿಂದ ರಸಮಂಜರಿ ಕಾರ್ಯಕ್ರಮ ನಡೆಯಲಿದೆ.

ಡಾ ಎಂ ಪಿ ಎಂ ಮಂಜುನಾಥ ಅಧ್ಯಕ್ಷತೆ ವಹಿಸುವರು.ಮಧ್ಯಾಹ್ನ 2 ಗಂಟೆಗೆ ಶಿಕ್ಷಕ ಲೇಖಕ ಆರ್ ಬಿ ಗುರುಬಸವರಾಜ "ಪವಾಡ ರಹಸ್ಯ ಬಯಲು" ಕುರಿತು ಪ್ರಾತ್ಯಕ್ಷಿಕೆ ನೀಡುವರು.

ಅ 15 ಬೆಳಿಗ್ಗೆ 10 ಗಂಟೆಗೆ ವಕೀಲರಾದ ಹನುಮಂತಪ್ಪ ಗದುಗಿನ "ಕಾನೂನು ಅರಿವು" ಕುರಿತು ಮಾಹಿತಿ ನೀಡುವರು. ಮಧ್ಯಾಹ್ನ ನಡೆಯುವ ಸಮಾರೋಪ ಸಮಾರಂಭದಲ್ಲಿ ಕ್ಷೇತ್ರ ಸಮನ್ವಯಾಧಿಕಾರಿ ಎ ಕೋಟೆಪ್ಪ ಸಮಾರೋಪ ಭಾಷಣ ಮಾಡುವರು.

ಪಟ್ಟಣದ ಪ್ರೌಢಶಾಲೆಗಳ ಮುಖ್ಯ ಗುರುಗಳಾದ ಬಿ ರವೀಂದ್ರನಾಥ, ಕೋಟೆಪ್ಪ, ರಾಘವೇಂದ್ರ, ಸುರೇಶ ಅಂಗಡಿ, ಉಪನ್ಯಾಸಕರಾದ ಎಂ ನೆಪೋಲಿಯನ್, ಅಶೋಕ್ ಈಡಿಗರ, ಎ ಕೆ ನಾಗರಾಜ್, ಭಾಸ್ಕರ್ ನಂದಿ, ಬಿ ವಿರುಪಾಕ್ಷಪ್ಪ ಇತರರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಮೂರೂ ದಿನಗಳ ಕಾಲ ಬಿ ಇ ಡಿ ಪ್ರಶಿಕ್ಷಣಾರ್ಥಿಗಳಿಗೆ ಸಾಮಾಜಿಕ ಸ್ವಾಸ್ಥ್ಯ ಸಂಕಲ್ಪ ಉತ್ತಮ ಸಮಾಜ ನಿರ್ಮಾಣಕ್ಕೆ ಪೂರಕವಾದ ಅಂಶಗಳನ್ನು ಮನವರಿಕೆ ಮಾಡಿಕೊಡುವ ಉದ್ದೇಶದಿಂದ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ಸಂಚಾಲಕ ಕೆ ಭೋಜರಾಜ ತಿಳಿಸಿದ್ದಾರೆ.

### ಅ.11 ರಂದು ಕೆ–ಸೆಟ್ ಪರೀಕ್ಷೆ: ಜಿಲ್ಲಾಡಳಿತದಿಂದ ಸಕಲ ಸಿದ್ಧತೆ

# 10,422 ಅಭ್ಯರ್ಥಿಗಳು ಭಾಗಿ, ಅಭ್ಯರ್ಥಿಗಳಿಗೆ ಉಚಿತ ವಸತಿ ವ್ಯವಸ್ಥೆ

ಬಳ್ಳಾರಿ,9– ಕರ್ನಾಟಕ ಪರೀಕ್ಷಾ ಪ್ರಾಧಿಕಾರ ವತಿಯಿಂದ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀ–ಕ್ಷೆ (ಕೆ–ಸೆಟ್) ಅಕ್ಟೋಬರ್ 11 ರ ಭಾನುವಾರದಂದು ನಡೆಯಲಿದ್ದು, ಜಿಲ್ಲಾಡಳಿತ ಪರೀಕ್ಷೆಯನ್ನು ಸುಸೂತ್ರವಾಗಿ ನಡೆಸಲು ಸಕಲ ಸಿದ್ಧತೆಗಳನ್ನು ಕೈಗೊಂಡಿದೆ. ಬಳ್ಳಾರಿ ನಗರದ ಒಟ್ಟು 20 ಪರೀಕ್ಷಾ ಕೇಂದ್ರಗಳಲ್ಲಿ ಅಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಪತ್ರಿಕೆ–1 ಮತ್ತು ಪತ್ರಿಕೆ–2 ರ ಪರೀಕ್ಷೆಗಳು ಜರುಗಲಿದ್ದು, ಒಟ್ಟು 10,422 ಅಭ್ಯರ್ಥಿಗಳು ಹಾಜರಾಗಲಿದ್ದಾರೆ ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ತಿಳಿಸಿದ್ದಾರೆ.

ಅಭ್ಯರ್ಥಿಗಳಿಗೆ ಉಚಿತ ವಸತಿ ಸೌಲಭ್ಯ:*

ಹೊರಗಿನಿಂದ ಆಗಮಿಸುವ ಪರೀಕ್ಷಾರ್ಥಿಗಳಿಗೆ ಅನುಕೂಲವಾಗುವಂತೆ ಜಿಲ್ಲಾಡಳಿತದಿಂದ ಅಕ್ಟೋಬರ್ 10 ರಂದು ವಸತಿ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಪುರುಷ ಅಭ್ಯರ್ಥಿಗಳಿಗೆ:–ಕೌಲ್ ಬಜಾರ್‌ನ ರಂಗಮಂದಿರ ರಸ್ತೆಯಲ್ಲಿರುವ ಬಾಬು ಜಗಜೀವನ್ ರಾಮ್ ಭವನ (ನೋಡಲ್ ಅಧಿಕಾರಿ: ಚಿದಾನಂದಪ್ಪ, ಮೊ: 9900223306).

ಮಹಿಳಾ ಅಭ್ಯರ್ಥಿಗಳಿಗೆ:– ಕೌಲ್ ಬಜಾರ್‌ನ ಸ್ಟೇಡಿಯಂ ರಸ್ತೆಯಲ್ಲಿರುವ ವಾಲ್ಮೀಕಿ ಭವನ (ನೋಡಲ್ ಅಧಿಕಾರಿ: ಶಾಷು, ಮೊ: 9942451535).

ಅಭ್ಯರ್ಥಿಗಳಿಗೆ ಪ್ರಮುಖ ಸೂಚನೆಗಳು: ಎಲ್ಲಾ ಅಭ್ಯರ್ಥಿಗಳು ಪರೀಕ್ಷಾ ಕೇಂದ್ರಗಳಿಗೆ ಪರೀ–ಕ್ಷೆ ಪ್ರಾರಂಭವಾಗುವ ಕನಿಷ್ಠ 2 ಗಂಟೆಗಳ ಮುಂಚಿತವಾಗಿ ಹಾಜರಾಗಬೇಕು. ಪ್ರವೇಶ ಪತ್ರದೊಂದಿಗೆ (ಹಾಲ್ ಟಿಕೆಟ್) ಭಾವಚಿತ್ರವಿರುವ ಅಧಿಕೃತ ಗುರುತಿನ ಚೀಟಿ (ಆಧಾರ್ ಕಾರ್ಡ್ ಅಥವಾ ಮತದಾರರ ಗುರುತಿನ ಚೀಟಿ) ತರುವುದು ಕಡ್ಡಾಯ.



ಕಟ್ಟುನಿಟ್ಟಿನ ನಿಯಮ ಮತ್ತು ನಿಷೇಧಾಜ್ಞೆ: ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಪರೀಕ್ಷಾ ಕೇಂದ್ರಗಳ ಸುತ್ತಲಿನ 200 ಮೀಟರ್ ವ್ಯಾಪ್ತಿಯನ್ನು ನಿರ್ಬಂಧಿತ ಪ್ರದೇಶವೆಂದು ಘೋಷಿಸಲಾಗಿದೆ. ಆಸುಪಾಸಿನ ಜೆರಾಕ್ಸ್ ಮತ್ತು ಇಂಟರ್ನೆಟ್ ಕೆಫೆಗಳನ್ನು ಮುಚ್ಚಲು ಆದೇಶಿಸಲಾಗಿದೆ.

*:ಸಾಮಾಜಿಕ ಜಾಲತಾಣಗಳ ಮೇಲೆ ನಿಗಾ: ಪರೀಕ್ಷೆಗೆ ಸಂಬಂಧಿಸಿದಂತೆ ಸುಳ್ಳು ಸುದ್ದಿ ಅಥವಾ ವದಂತಿಗಳನ್ನು ಹಬ್ಬಿಸುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು 100ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿ ಸಾಮಾಜಿಕ ಜಾಲತಾಣಗಳ ಮೇಲೆ ತೀವ್ರ ನಿಗಾ ಇರಿಸಿದ್ದಾರೆ. ಎಲ್ಲಾ ಕೇಂದ್ರಗಳಿಗೂ ಸೂಕ್ತ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದೆ.

ಮೂಲಸೌಕರ್ಯ ಮತ್ತು ಇತರ ವ್ಯವಸ್ಥೆಗಳು: ಹೆಚ್ಚುವರಿ ಬಸ್ ಸೌಲಭ್ಯ: ಅಭ್ಯರ್ಥಿಗಳು ಸರಿಯಾದ ಸಮಯಕ್ಕೆ ಕೇಂದ್ರ ತಲುಪಲು ಕೆ.ಕೆ.ಆರ್.ಟಿ.ಸಿ ವತಿಯಿಂದ ಹೆಚ್ಚುವರಿ ಬಸ್‌ಗಳನ್ನು ನಿಯೋಜಿಸಲಾಗಿದೆ.

ಆರೋಗ್ಯ ತಪಾಸಣೆ: ಪ್ರತಿ ಕೇಂದ್ರದಲ್ಲಿ 'ಥರ್ಮಲ್ ಸ್ಕ್ಯಾನರ್', 'ಪಲ್ಸ್ ಆಕ್ಸಿಮೀಟರ್' ಮತ್ತು ಪ್ರಥಮ ಚಿಕಿತ್ಸಾ ಪೆಟ್ಟಿಗೆಯೊಂದಿಗೆ ಆರೋಗ್ಯ ಇಲಾಖೆಯ ಇಬ್ಬರು ಅರೆ ವೈದ್ಯಕೀಯ ಸಿಬ್ಬಂದಿಗಳು ಹಾಜರಿರುತ್ತಾರೆ.

ಮೂಲಸೌಕರ್ಯ: ಕೇಂದ್ರಗಳಲ್ಲಿ ಕುಡಿಯುವ ನೀರು, ಬೆಳಕು, ಸ್ವಚ್ಛತೆ ಹಾಗೂ ವಿದ್ಯುತ್ ವ್ಯತ್ಯಯವಾಗದಂತೆ ಜೆಸ್ಕಾಂ ವತಿಯಿಂದ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಗೌಪ್ಯತೆ ರಕ್ಷಣೆ: ಪ್ರಶ್ನೆಪತ್ರಿಕೆ ಮತ್ತು ಗೌಪ್ಯ ಸಾಮಗ್ರಿಗಳ ಸಾಗಾಣಿಕೆಗೆ ತ್ರಿಸದಸ್ಯ ಮಾರ್ಗಾಧಿಕಾರಿಗಳ ತಂಡ, ಖಜಾನೆಯಲ್ಲಿ 24/7 ಸಿಸಿಟಿವಿ ಕಣ್ಗಾವಲು ಹಾಗೂ ಪ್ರತಿ ಕೇಂದ್ರಕ್ಕೂ ಒಬ್ಬ ವೀಕ್ಷಕರನ್ನು ನೇಮಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಅಭ್ಯರ್ಥಿಗಳು ಅಧಿಕೃತ ವೆಬ್‌ಸೈಟ್ ಇಜಚಿ.ಇಚಿಡಿ.ಟುಥಿ.ಟಿ ಗೆ ಭೇಟಿ ನೀಡಬಹುದು ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಯಾರೂ ಗುಳೆ ಹೋಗಬೇಡಿ, ಗ್ರಾಮದಲ್ಲೇ ನಿರಂತರ ಉದ್ಯೋಗ

# ಜಿ.ಪಂ ಸಿಇಒ ಮಹಮ್ಮದ್ ಹಾರೀಸ್ ಸುಮೈರ್ ಭರವಸೆ

ಬಳ್ಳಾರಿ,09– ಗ್ರಾಮೀಣ ಭಾಗದ ಕೂಲಿಕಾರರು ಉದ್ಯೋಗ ಅರಸಿ ಬೇರೆ ಊರುಗಳಿಗೆ ಗುಳೆ ಹೋಗುವುದನ್ನು ತಪ್ಪಿಸಲು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲೇ ನಿರಂತರವಾಗಿ ಕೆಲಸ ಒದಗಿಸಲಾಗುವುದು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರೀಸ್ ಸುಮೈರ್ ಅವರು ತಿಳಿಸಿದರು.



ಶುಕ್ರವಾರ ಬಳ್ಳಾರಿ ತಾಲೂಕಿನ ಹಲಕುಂದಿ ಮತ್ತು ಸಂಜೀವರಾಯನ ಕೋಟೆ ಗ್ರಾಮ ಪಂಚಾಯತಿಗಳಿಗೆ ಭೇಟಿ ನೀಡಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಪರಿಶೀಲಿಸಿದ ಅವರು, ಕೂಲಿಕಾರರೊಂದಿಗೆ ನೇರ ಸಂವಾದ ನಡೆಸಿದರು.

ಗುಳೆ ಹೋದರೆ ಕುಟುಂಬಕ್ಕೆ ಸಂಕಷ್ಟ: ಹಲಕುಂದಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹೊನ್ನಳ್ಳಿ ತಾಂಡಾದ ಗುಡ್ಡದ ಬಳಿ ನಡೆಯುತ್ತಿರುವ ಟ್ರೆಂಚ್ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿದ ಸಿಇಒ, ಅಲ್ಲಿ ಕೆಲಸ ಮಾಡುತ್ತಿದ್ದ ಕೂಲಿಕಾರರು ಹಾಗೂ ಮೇಟಿಗಳ ಜತೆ ಸಮಾಲೋಚನೆ ನಡೆಸಿದರು. "ಬೇರೆ ಊರುಗಳಿಗೆ ಗುಳೆ ಹೋದರೆ ಮಕ್ಕಳ ವಿದ್ಯಾಭ್ಯಾಸ ಮೊಟಕುಗೊಳ್ಳುತ್ತದೆ, ಮಹಿಳೆಯರಿಗೆ ಸುರಕ್ಷತೆ ಇರುವುದಿಲ್ಲ ಹಾಗೂ ವಯಸ್ಸಾದ ಪೋಷಕರ ಪಾಲನೆ–ಪೋಷಣೆಗೆ ತೊಂದರೆಯಾಗುತ್ತದೆ. ಹಾಗಾಗಿ ಯಾರೂ ಗ್ರಾಮ ಬಿಟ್ಟು ಹೋಗಬಾರದು. ಕೂಲಿಕಾರರಿಗೆ ಗ್ರಾಮ ಪಂಚಾಯತಿಯಿಂದಲೇ ನಿರಂತರವಾಗಿ ಉದ್ಯೋಗ ಕಲ್ಪಿಸಬೇಕು" ಎಂದು ಸ್ಥಳದಲ್ಲಿದ್ದ ಪಿಡಿಒ ಅವರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ವಿವಿಧ ಕಾಮಗಾರಿಗಳ ಪರಿಶೀಲನೆ: ಎಸ್.ಜಿ. ಕೋಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕೈಗೆತ್ತಿಕೊಳ್ಳಲಾಗಿರುವ ಹೊಸ ಕೆರೆ ಕಾಮಗಾರಿಯನ್ನು ಸಿಇಒ ಪರಿಶೀಲಿಸಿದರು. ಬಳಿಕ ಮಿಂಚೇರಿ ಗ್ರಾಮದ 2ನೇ ವಾರ್ಡಿನಲ್ಲಿ ಉದ್ಭವಿಸಿರುವ ಕುಡಿಯುವ ನೀರಿನ ಸಮಸ್ಯೆಯನ್ನು ಖುದ್ದು ವೀಕ್ಷಿಸಿ ಪರಿಹಾರಕ್ಕೆ ಕ್ರಮ ಕೈಗೊಳ್ಳಲು ಸೂಚಿಸಿದರು. ಇದೇ ವೇಳೆ ಗ್ರಾಮದಲ್ಲಿ ತ್ಯಾಜ್ಯ ವಿಂಗಡಣಾ ಘಟಕದಲ್ಲೇ ಕಸವನ್ನು ಸರಿಯಾಗಿ ಬೇರ್ಪಡಿಸಬೇಕು, ಸಾರ್ವಜನಿಕ ಸ್ಥಳಗಳಲ್ಲಿ ಕಸ ಹಾಕದಂತೆ ನಿಗಾ ವಹಿಸಿ ಗ್ರಾಮದ ಸ್ವಚ್ಛತೆ ಕಾಪಾಡಬೇಕು ಎಂದು ವಾಹನ ಚಾಲಕರು ಮತ್ತು ಪಿಡಿಒ ಅವರಿಗೆ ನಿರ್ದೇಶನ ನೀಡಿದರು.

ಆಸ್ಪತ್ರೆ, ಗ್ರಂಥಾಲಯ, ಅಂಗನವಾಡಿಗೆ ಭೇಟಿ: ಗ್ರಾಮದ ಆಯುಷ್ಮಾನ್ ಭಾರತ್ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ವೈದ್ಯರೊಂದಿಗೆ ಚರ್ಚಿಸಿದರಲ್ಲದೆ, ತಪಾಸಣೆಗೆ ಬಂದಿದ್ದ ಸಾರ್ವಜನಿಕರ ಆರೋಗ್ಯ ವಿಚಾರಿಸಿದರು. ನಂತರ ಸ್ಥಳೀಯ ಗ್ರಂಥಾಲಯಕ್ಕೆ ತೆರಳಿ, ಅಲ್ಲಿ ಆಯೋಜಿಸಲಾಗಿದ್ದ ಬೇಸಿಗೆ ಶಿಬಿರದಲ್ಲಿ ಭಾಗವಹಿಸಿದ್ದ ಮಕ್ಕಳೊಂದಿಗೆ ಉತ್ಸಾಹದಿಂದ ಸಂವಾದ ನಡೆಸಿದರು.

ಗ್ರಾಮದ ಅಂಗನವಾಡಿ ಕೇಂದ್ರಕ್ಕೂ ಭೇಟಿ ನೀಡಿ ಮಕ್ಕಳ ಹಾಜರಾತಿ, ಪೌಷ್ಟಿಕ ಆಹಾರ ವಿತರಣೆ ಹಾಗೂ ಅಡುಗೆ ಕೋಣೆಯ ವ್ಯವಸ್ಥೆಯನ್ನು ಪರಿಶೀಲಿಸಿದರು.

ಈ ಸಂದರ್ಭದಲ್ಲಿ ಬಳ್ಳಾರಿ ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ಶ್ರೀಧರ್ ಬಾರಕೇರ್, ಗ್ರಾಮೀಣ ಉದ್ಯೋಗ ಸಹಾಯಕ ನಿರ್ದೇಶಕರಾದ ಆರ್.ಕೆ. ಬಸವರಾಜ್, ಟಿಐಇಸಿ ರಮೇಶ್, ಟಿಸಿ ವಿಜಯಮಹಾಂತೇಶ್, ಸಬ್ ಜಾನ್, ಶಾವಲಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯಿತಿ ಸಿಬ್ಬಂದಿ ಹಾಗೂ ತಾಂತ್ರಿಕ ಸಂಯೋಜ–ಕರು ಉಪಸ್ಥಿತರಿದ್ದರು.

# ಆರೋಗ್ಯದ ಬಗ್ಗೆ ನಿರ್ಲಕ್ಷ್ಯ ಬೇಡ: ಡಾ. ಮರಿಯಂಬಿ ವಿಕೆ

ಬಳ್ಳಾರಿ,09– ವಯಸ್ಸಾದಂತೆ ಸಾಮಾನ್ಯವಾಗಿ ಕಣ್ಣಿನ ಪೊರೆ, ಕಿವುಡುತನ, ರಕ್ತದೊತ್ತಡ, ಮಧುಮೇಹ, ಖಿನ್ನತೆ, ಬುದ್ಧಿಮಾಂದ್ಯತೆ, ನರಗಳ ಸಮಸ್ಯೆ, ಹೃದ್ರೋಗ, ಲಕ್ವ, ಮೂಳೆ ಮುರಿತ, ಅನಿಯಂತ್ರಿತ ಮೂತ್ರ ವಿಸರ್ಜನೆ ಹಾಗೂ ಮಲಬದ್ಧತೆಯಂತಹ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ಈ ಎಲ್ಲಾ ಕಾಯಿಲೆಗಳಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಗುಣಮಟ್ಟದ ಚಿಕಿತ್ಸೆ ಲಭ್ಯವಿದ್ದು, ಯಾರೂ ನಿರ್ಲಕ್ಷ್ಯ ತೋರದೆ ಕಾಲಕಾಲಕ್ಕೆ ತಪಾಸಣೆ ಮಾಡಿಸಿಕೊಳ್ಳಬೇಕು ಎಂದು ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ಮರಿಯಂಬಿ ವಿ.ಕೆ ಅವರು ಕರೆ ನೀಡಿದರು.



ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಸರ್ವೇಕ್ಷಣಾ ಘಟಕ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಸಮಗ್ರ ಸಾಮಾಜಿಕ ಮತ್ತು ನೈತಿಕ ಅಭಿವೃದ್ಧಿ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ನಗರದ ಹಿರಿಯ ನಾಗರಿಕರ ಹಗಲು ಂ ಿ ೂ ೀ ಗ ಕ್ಷೇ ವ ಂ ಕೇಂದ್ರದಲ್ಲಿ ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಅಂಗವಾಗಿ ಶುಕ್ರವಾರ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಈ ವರ್ಷದ ದಿನಾಚರಣೆಯನ್ನು 'ಗೌರವಯುತ ವೃದ್ಧಾಪ್ಯ: ಹಿರಿಯ ನಾಗರಿಕರಿಗಾಗಿ ಆರೈಕೆ ಮತ್ತು ಬೆಂಬಲ ವ್ಯವಸ್ಥೆಗಳ ಬಲವರ್ಧನೆ' ಎಂಬ ಘೋಷಣೆಯೊಂದಿಗೆ ಆಚರಿಸಲಾಗುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ 'ಸ್ಮೈಲ್' ಸಂಸ್ಥೆಯ ಕಾರ್ಯದರ್ಶಿ ಕೆ.ಎಂ. ಉಮಾಪತಿ ಗೌಡ್ರು, ತಜ್ಞ ವೈದ್ಯರಾದ ಡಾ. ಭರತ್, ಡಾ. ಜ್ಞಾನ ಅಭಿಲಾಷ್, ಹಿರಿಯ ದಂತ ವೈದ್ಯರಾದ ಡಾ. ವಿಶಾಲಾಕ್ಷಿ, ಆಡಳಿತ ವೈದ್ಯಾಧಿಕಾರಿ ಡಾ. ದಿವ್ಯಾ, 'ನಮ್ಮ ಕ್ಲಿನಿಕ್' ವೈದ್ಯ ಡಾ. ಸಾತ್ವಿಕ್, ಜಿಲ್ಲಾ ಫ್ಲೋರೋಸಿಸ್ ಸಲಹೆಗಾರ್ತಿ ಡಾ. ಪ್ರಿಯಾಂಕಾ ಹಾಗೂ ಕಾರ್ಯಕ್ರಮ ವ್ಯವಸ್ಥಾಪಕ ಕೇಶವ ಕಭಿ ಹಾಗೂ ಇತರರು ಉಪಸ್ಥಿತರಿದ್ದರು.

# ಜಿಲ್ಲಾ ಮಟ್ಟದ ಅಥ್ಲೆಟಿಕ್ಸ್ ಎಸ್‌ಕೆಜಿಜಿ ವಿದ್ಯಾರ್ಥಿನಿಯರು ರಾಜ್ಯಮಟ್ಟಕ್ಕೆ ಆಯ್ಕೆ

ವರದಿ : ಡಿ.ಪರಶುರಾಮಪ್ಪ

ಹ ೂ ವಿ ನ ಹ ಡ ಗ ಲಿ, 9– ಹರಪನಳ್ಳಿಯಲ್ಲಿ ಆ ಂ ಿ ೂ ೀ ಜಿ ಸ ಲಾ ಗಿ ದ್ದ ಜಿಲ್ಲಾಮಟ್ಟದ ಅಥ್ಲೆಟಿ–ಕ್ಸ್ ಕ್ರೀಡಾಕೂಟದಲ್ಲಿ ಪಟ್ಟಣದ ಎಸ್.ಕೆ.ಜಿ.ಜಿ. ಕಾಲೇಜಿನ ವಿದ್ಯಾರ್ಥಿನಿಯರು ಗಮನಾರ್ಹ ಸಾಧನೆ ಮಾಡುವ ಮೂಲಕ ಕಾಲೇಜಿಗೆ ಕೀರ್ತಿ ತಂದಿದ್ದಾರೆ.



ವಿವಿಧ ಅಥ್ಲೆಟಿಕ್ಸ್ ಸ್ಪರ್ಧೆಗಳಲ್ಲಿ ಉತ್ತಮ ಪ್ರದರ್ಶನ ನೀಡಿದ ವಿದ್ಯಾರ್ಥಿನಿಯರು ರಾಜ್ಯಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾರೆ ಎಂದು ಪ್ರಾಚಾರ್ಯ ಎ ಕೊಟ್ರಗೌಡ ತಿಳಿಸಿದರು.

ಆಶಾ ಅಂಗಡಿ ಭರ್ಚಿ ಎಸೆತ(ಪ್ರಥಮ) ಹಾಗೂ ಚಕ್ರ ಎಸೆತದಲ್ಲಿ ದ್ವಿತೀಯ ಸ್ಥಾನ ಗಳಿಸಿ ಗಮನ ಸೆಳೆದಿದ್ದಾರೆ.

ಸೃಷ್ಟಿ ದೇವರಮನಿ ಉದ್ದ ಜಿಗಿತ (ಪ್ರಥಮ) ಸ್ಥಾನ ಮಂಜುಳಾ ಗುಂಡು ಎಸೆತ (ದ್ವಿತೀಯ)

ಅಭಿ ಎಸ್. 3,000 ಮೀಟರ್ ಓಟದಲ್ಲಿ ತೃತೀಯ ಸ್ಥಾನ ಪಡೆದಿದ್ದಾರೆ.

ವಿದ್ಯಾರ್ಥಿನಿಯರ ಈ ಸಾಧನೆಯು ಅವರ ನಿರಂತರ ಅಭ್ಯಾಸ, ಕ್ರೀಡೆಯ ಬಗೆಗಿನ ಆಸಕ್ತಿ ಮತ್ತು ಸ್ಪರ್ಧಾತ್ಮಕ ಮನೋಭಾವವನ್ನು ಪ್ರತಿಬಿಂಬಿಸಿದೆ. ಜಿಲ್ಲಾ ಮಟ್ಟದಲ್ಲಿ ಉತ್ತಮ ಪ್ರದರ್ಶನ ನೀಡಿರುವ ವಿದ್ಯಾರ್ಥಿನಿಯರು ಮುಂಬರುವ ರಾಜ್ಯಮಟ್ಟದ ಸ್ಪರ್ಧೆಗಳಲ್ಲಿ ತಮ್ಮ ಪ್ರತಿಭೆಯನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಅನಾವರಣಗೊಳಿಸುವ ನಿರೀಕ್ಷೆ ವ್ಯಕ್ತವಾಗಿದೆ.

ವಿದ್ಯಾರ್ಥಿನಿಯರ ಸಾಧನೆಗೆ ಕಾಲೇಜಿನ ಪ್ರಾಚಾರ್ಯ ಕೊಟ್ರಗೌಡ, ಕ್ರೀಡಾ ಕಾರ್ಯದರ್ಶಿ ದುಷ್ಯಂತ, ಉಪನ್ಯಾಸಕ ಬಸೆಟ್ಟಿ ಪ್ರಕಾಶ್ ಸೇರಿದಂತೆ ಎಲ್ಲ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಅಭಿನಂದನೆ ಸಲ್ಲಿಸಿದ್ದಾರೆ. ವಿದ್ಯಾರ್ಥಿನಿಯರ ಕ್ರೀಡಾ ಸಾಧನೆಗೆ ಹರ್ಷ ವ್ಯಕ್ತಪಡಿಸಿರುವ ಅವರು, ರಾಜ್ಯಮಟ್ಟದಲ್ಲಿಯೂ ಉತ್ತಮ ಪ್ರದರ್ಶನ ನೀಡಿ ಕಾಲೇಜಿಗೆ ಗೌರವ ತರಲಿ ಎಂದು ಶುಭ ಹಾರೈಸಿದ್ದಾರೆ.

# ಇಟ್ಟಿಗಿ : ಉಚಿತ ಆರೋಗ್ಯ ತಪಾಸಣೆ ಶಿಬಿರ



ವರದಿ : ಡಿ.ಪರಶುರಾಮಪ್ಪ

ಹೂವಿನಹಡಗಲಿ, 9– ಆರೋಗ್ಯ ಸಂಪತ್ತು ಮಾನವನ ಬದುಕಿನಲ್ಲಿ ಅಭಿವೃದ್ಧಿ ಹೊಂದುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ.ಗ್ರಾಮೀಣ ಭಾಗದಲ್ಲಿ ಕೂಲಿ ಕಾರ್ಮಿಕರ ಜೀವನ ಸಂಕಷ್ಟದ ಸ್ಥಿತಿಯಲ್ಲಿ ಇದ್ದೂ ಈ ಜನರ ಸೇವೆ ಮಾಡುವುದು ದೇವರ ಸೇವೆ ಮಾಡಿದಂತೆ, ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡುವ ಉದ್ದೇಶದಿಂದ ಆರೋಗ್ಯ ತಪಾಸಣೆಯನ್ನು ತಾಲೂಕಿನ ಇಟ್ಟಿಗಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ವಿಬಿಜಿ ರಾಮ್ ಜಿ ಯೋಜನೆಯಡಿ ಇಟ್ಟಿಗಿ ಗ್ರಾಮದ ಕೊಟ್ಟೂರು ರಸ್ತೆ ಗೋಕಟ್ಟೆ ಅಭಿವೃದ್ಧಿ ಪಡಿಸುವ ಕಾಮಗಾರಿ ಸ್ಥಳದಲ್ಲಿ ಕೂಲಿಕಾರ್ಮಿಕರಿಗಾಗಿ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಂಡು ಆರೋಗ್ಯ ಸಿಬ್ಬಂದಿಗಳು ಆರೋಗ್ಯ ತಪಾಸಣೆ ನಡೆಸಿದರು. ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ಮತ್ತು ಸಿಬ್ಬಂದಿಗಳು ಕೂಲಿ ಕಾರ್ಮಿಕರ ಬಿಪಿ, ಶುಗರ್ ಮತ್ತು ಇನ್ನಿತರೇ ಆರೋಗ್ಯದ ಕುರಿತು ತಪಾಸಣೆ ನಡೆಸಿ ಔಷದಿಗಳನ್ನು ವಿತರಿಸಿದರು. ಗ್ರಾಮ ಪಂಚಾಯತಿ ಪಿಡಿಓ ಅನುಪಸ್ಥಿತಿಯಲ್ಲಿ ಗ್ರಾ.ಪಂ.ಸಿಬ್ಬಂದಿಗಳು, ಕೂಲಿ ಕಾರ್ಮಿಕರು, ಮೇಟಿಗಳು, ಜಿಕೆಎಂ, ಬಿಎಫ್ ಟಿ ಮತ್ತು ಗ್ರಾಮ ಪಂಚಾಯತಿಯ ಕ್ಲರ್ಕ್ ಕಂ ಡಿಇಒ, ಬಿಲ್ ಕಲೆಕ್ಟರ್, ವಿಆರ್ ಡಬ್ಲ್ಯೂ ಇನ್ನಿತರರು ಹಾಜರಿದ್ದರು.

### ಹೊನ್ನಳ್ಳಿ ತಾಂಡಾದಲ್ಲಿ ವಿಬಿಜಿರಾಮ್ ಜಿ ಕಾಮಗಾರಿ ಪರಿಶೀಲನೆ

# ಜಿಪಂ ಸಿಇಒ ಮಹಮ್ಮದ್ ಭೇಟಿ

ಬಳ್ಳಾರಿ,09– ಬಳ್ಳಾರಿ ತಾಲೂಕಿನ ಹಲಕುಂದಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹೊನ್ನಳ್ಳಿ ತಾಂಡಾ ಗ್ರಾಮದಲ್ಲಿ ವಿಬಿಜಿ ರಾಮ್ ಜಿ ಯೋಜನೆಯಡಿ ಕೈಗೊಳ್ಳಲಾಗಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳ ಸ್ಥಳಕ್ಕೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರೀಸ್ ಸುಮೇರ್ ಅವರು ಶುಕ್ರವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.



ಸ್ಥಳದಲ್ಲೇ ಹಾಜರಿದ್ದ ಕೂಲಿ ಕಾರ್ಮಿಕರೊಂದಿಗೆ ನೇರವಾಗಿ ಸಮಾಲೋಚನೆ ನಡೆಸಿದ ಸಿಇಒ ಅವರು, ಕಾಮಗಾರಿಯ ಪ್ರಗತಿ, ಗುಣಮಟ್ಟ ಹಾಗೂ ಯೋಜನೆಯ ಸಮರ್ಪಕ ಅನುಷ್ಠಾನದ ಕುರಿತು ಕೂಲಂಕಷವಾಗಿ ಪರಿಶೀಲಿಸಿದರು. ಕೂಲಿ ಕಾರ್ಮಿಕರಿಗೆ ನಿಗದಿತ ಸಮಯಕ್ಕೆ ವೇತನ ಪಾವತಿಯಾಗುತ್ತಿದೆಯೇ, ಕೆಲಸದ ಸ್ಥಳದಲ್ಲಿ ಕುಡಿಯುವ ನೀರು, ನೆರಳು ಮತ್ತು ಪ್ರಥಮ ಚಿಕಿತ್ಸಾ ಪೆಟ್ಟಿಗೆ ಸೇರಿದಂತೆ ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸಲಾಗಿದೆಯೇ ಎಂಬ ಮಾಹಿತಿಯನ್ನು ಖುದ್ದು ಕಾರ್ಮಿಕರಿಂದ ಪಡೆದುಕೊಂಡರು.

ಗ್ರಾಮೀಣ ಭಾಗದ ಜನರಿಗೆ ಸ್ಥಳೀಯ ಮಟ್ಟದಲ್ಲೇ ಉದ್ಯೋಗ ಒದಗಿಸಿ ಆರ್ಥಿಕವಾಗಿ ಸಬಲೀಕರಣಗೊಳಿಸುವುದು ಮತ್ತು ಗ್ರಾಮೀಣ ಮೂಲಸೌಕರ್ಯಗಳನ್ನು ಬಲಪಡಿಸುವುದು ಯೋಜನೆಯ ಮುಖ್ಯ ಉದ್ದೇಶವಾಗಿದ್ದು, ಯಾವುದೇ ರೀತಿಯ ಲೋಪದೋಷಗಳಿಗೆ ಅವಕಾಶ ನೀಡದೆ ಪಾರದರ್ಶಕವಾಗಿ ಕೆಲಸ ನಿರ್ವಹಿಸುವಂತೆ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಸೂಚನೆ ನೀಡಿ–ದರು.

ಈ ಸಂದರ್ಭದಲ್ಲಿ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಶ್ರೀಧರ್ ಬಾರಿಕರ, ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಸಹಾಯಕ ನಿರ್ದೇಶಕರು, ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ಸಿಬ್ಬಂದಿ, ಗ್ರಾಮ ಪಂಚಾಯಿತಿ ಅಧಿಕಾರಿಗಳು ಹಾಗೂ ಸ್ಥಳೀಯ ಸಾರ್ವಜನಿಕರು ಉಪಸ್ಥಿತರಿದ್ದರು.

# ಲಂಚ ಸ್ವೀಕರಿಸುತ್ತಿದ್ದಾಗ ಸಿಕ್ಕಿಬಿದ್ದ ಅರಣ್ಯ ಇಲಾಖೆ ಅಧಿಕಾರಿಗೆ 5 ವರ್ಷ ಕಠಿಣ ಕಾರಾವಾಸ, 6 ಲಕ್ಷ ದಂಡ – ಹೊಸಪೇಟೆ ನ್ಯಾಯಾಲಯ ತೀರ್ಪು

ಹೊಸಪೇಟೆ,09– ಲಂಚ ಸ್ವೀಕರಿಸುವಾಗ ಲೋಕಾಯುಕ್ತ ಪೊಲೀಸರಿಂದ ಸಿಕ್ಕಿಬಿದ್ದಿದ್ದ ಅರಣ್ಯ ಇಲಾಖೆಯ ಉಪ ವಲಯ ಅರಣ್ಯಾಧಿಕಾರಿಗೆ (ಡಿಆರ್‌ಎಫ್‌ಒ) ಹೊಸಪೇಟೆಯ 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ 5 ವರ್ಷ ಕಠಿಣ ಕಾರಾವಾಸ ಮತ್ತು 6 ಲಕ್ಷ ದಂಡ ವಿಧಿಸಿ ತೀರ್ಪು ನೀಡಿದೆ. ಈ ಕುರಿತು ಕರ್ನಾಟಕ ಲೋಕಾಯುಕ್ತ ಬಳ್ಳಾರಿಯ ಪೊಲೀಸ್ ಅಧೀಕ್ಷಕರು ಪತ್ರಿಕಾ ಪ್ರಕಟಣೆ ಹೊರಡಿಸಿದ್ದಾರೆ.

ಪ್ರಕರಣದ ವಿವರ: ವಿಜಯನಗರ ಜಿಲ್ಲೆಯ ಹೊಸಪೇಟೆ ಕಲೋ ಅಪರಾಧ ಸಂಖ್ಯೆ: 03/2014, ಕಲಂ 7,13(1)(ಡಿ) ರೆ/ವಿ 13(2) ಪಿ.ಸಿ ಕಾಯ್ದೆ 1988 ರ ಪ್ರಕರಣದಲ್ಲಿ ಫಿರ್ಯಾದಿದಾರರಾದ ಶ್ರೀ ಸೈಯದ್ ಶಬ್ಬೀರ್, ತಂದೆ ಮಹಮ್ಮದ್ ಹುಸೇನಿ, ವ್ಯವಸಾಯ ತಗ್ಗಿನಕೇರಿ, ಕೊಪ್ಪಳ ಇವರು ಆರೋಪಿತನಾದ ಶ್ರೀ ಪಂಪಾಪತಿ ನಾಯ್ಕ್ @ ಪಂಪಾಪತಿ.ಟಿ, ತಂದೆ ಶಾಂತನಾಯ್ಕ್, ಉಪ ವಲಯ ಅರಣ್ಯಾಧಿಕಾರಿ (ಡಿಆರ್‌ಎಫ್‌ಒ) ಅರಣ್ಯ ಇಲಾಖೆ, ಹೊಸಪೇಟೆ ವಲಯ ಇವರು ಫಿರ್ಯಾದಿದಾರರ ಚಿಪ್ಪರ್ ಲಾರಿ ಸಂಖ್ಯೆ ಕೆ.ಎ.37 ಎ.2014 ನೇದ್ದರ ಪರವಾನಿಗೆ ನಕಲಿ ಎಂದು ತನಗೆ 1,000/– ಗಳ ಲಂಚದ ಹಣ ನೀಡಿದರೆ ಲಾರಿಯನ್ನು ಬಿಡುವುದಾಗಿ ತಿಳಿಸಿದರು.

ಫಿರ್ಯಾದಿದಾರರು ತಮ್ಮ ಬಳಿ ಹಣವಿಲ್ಲವೆಂದು ತಿಳಿಸಿದಾಗ ಆರೋಪಿತನು ಫಿರ್ಯಾದಿದಾರರ ಮೊಬೈಲ್‌ನ್ನು ಕಸಿದುಕೊಂಡಿದ್ದು, ಮೊಬೈಲ್‌ನ್ನು ವಾಪಾಸ್ ನೀಡಲು 600/– ಗಳ ಲಂಚದ ಬೇಡಿಕೆ ಇಟ್ಟು, ದಿನಾಂಕ 23/07/2014 ರಂದು ಲಂಚದ ಹಣ ಸ್ವೀಕರಿಸುವಾಗ ಲಂಚದ ಹಣದ ಸಮೇತ ಸಿಕ್ಕಿಬಿದ್ದಿದ್ದರು.

ಶ್ರೀ ಮಹಾಂತೇಶ್.ವಿ. ಹೊಸಪೇಟೆ, ಪೊಲೀಸ್ ಇನ್ಸ್‌ಪೆಕ್ಟರ್, ಲೋಕಾಯುಕ್ತ, ಹೊಸಪೇಟೆ ಇವರು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಕ್ತಾಯಗೊಳಿಸಿ, ಮೇಲಾಧಿಕಾರಿಗಳ ಅನುಮತಿ ಪಡೆದು ದೋಷಾರೋಪಣೆ ಪತ್ರ ತಯಾರಿಸಿ ಹೊಸಪೇಟೆಯ 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಕ್ಕೆ ಕಲಂ 7,13(1)(ಡಿ) ರೆ/ವಿ 13(2) ಪಿ.ಸಿ ಕಾಯ್ದೆ 1988 ಅಡಿಯಲ್ಲಿ ದೋಷಾರೋಪಣೆ ಪಟ್ಟಿ ಸಲ್ಲಿಸಿಕೊಂಡಿದ್ದರು.

ತೀರ್ಪು: ಸದರಿ ಪ್ರಕರಣದಲ್ಲಿ ಘನ ನ್ಯಾಯಾಲಯವು ಆರೋಪಿತನ ಮೇಲಿನ ಅಪಾದನೆಗಳು ಸಾಬೀತಾದ ಮೇರೆಗೆ ಆರೋಪಿಗೆ 5 ವರ್ಷ ಕಠಿಣ ಕಾರಾವಾಸ, ಹಾಗೂ 6,00,000/– ರೂ ಗಳ ದಂಡ ವಿಧಿಸಿದ್ದು, ದಂಡದ ಹಣಕಟ್ಟಲು ವಿಫಲವಾದಲ್ಲಿ ಹೆಚ್ಚುವರಿ 12 ತಿಂಗಳ ಸಾದಾ ಕಾರಾವಾಸದ ಶಿಕ್ಷೆ ವಿಧಿಸಿ ಈ ದಿನ ದಿನಾಂಕ 09/10/2026 ರಂದು ಆದೇಶ ಹೊರಡಿಸಿದೆ.

'HOSAPETE NADIMIDITA ' KANNADA DAILY NEWSPAPER PRINTEDE BY RAMJEE NAIK R PUBLISHER AND OWNED BY RAMJEE NAIK R, PRINTED AT HOMBALI PRINTING, 3787/A/6-7C MAHENDRAKAR CIRCLE, GADAG KARNATAKA-582101
PRGI NO: KNKAN/26/A1167 PAGES-4, DATE 01/03/2026. PUBLISHED AT HN,93, KALLAHALLI VILLAGE, HOSPET POST, VIJAYANAGARA, -583201, KARNATAKA STATE, EDITOR:RAMJEE NAIK R, CELL-9448717472.